ವಿಜಯಪುರ । ಸಂಪುಟ 04 । ಸಂಚಿಕೆ 239 । ಪುಟ 04 । ₹ 3.00

https://udayarashminews.com

udayarashmi 90088 88340

ಉದಯರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಮಂಗಳವಾರ, ನವೆಂಬರ್ 17, 2026

"ಜೆಡಿ(ಎಸ್) ಮತ್ತು ಬಿಜೆಪಿ ನಡುವೆ ಅತ್ಯುತ್ತಮ ಸಮನ್ವಯವಿದೆ. ನಮ್ಮ ಮೈತ್ರಿಕೂಟದಲ್ಲಿ ಬಿರುಕು ಮೂಡಿಸಬಹುದು ಎಂದು ಕಾಂಗ್ರೆಸ್ ನಾಯಕರು ಹಗಲುಗನಸು ಕಾಣುತ್ತಿದ್ದಾರೆ. ಆದರೆ, ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ನಾವು ಒಟ್ಟಾಗಿ, ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡುತ್ತಿದ್ದೇವೆ"



■ ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವರು

ರೂ.1,600 ಕೋಟಿ ಹೂಡಿಕೆಯ ರಿಲಯನ್ಸ್ ಘಟಕ । ಜಿಲ್ಲೆಯಲ್ಲಿ 10 ರಿಂದ 12 ಸಾವಿರ ಉದ್ಯೋಗ ಸೃಷ್ಟಿಸುವ ಗುರಿ । ಭೂಮಿ ಕಳೆದುಕೊಂಡ ರೈತ ಕುಟುಂಬಗಳಿಗೆ ಉದ್ಯೋಗವೇ ಮೊದಲ ಆದ್ಯತೆ । ಕೃಷಿ, ಹೈನುಗಾರಿಕೆ, ಆಹಾರ ಸಂಸ್ಕರಣೆಗೂ ಆದ್ಯತೆ

ವಿಜಯಪುರದಲ್ಲಿ ಕೈಗಾರಿಕಾ ಕ್ರಾಂತಿಗೆ ಮುನ್ನುಡಿ :ಸಚಿವ ಎಂ.ಬಿ.ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೈಗಾರಿಕೆಗಳು ಕೇವಲ ಬೆಂಗಳೂರು ಸುತ್ತಮುತ್ತ ಸೀಮಿತವಾಗದೆ ಉತ್ತರ ಕರ್ನಾಟಕದ ವಿಜಯಪುರದಂತಹ ಜಿಲ್ಲೆಗಳಲ್ಲಿಯೂ ವ್ಯಾಪಕವಾಗಿ ಬೆಳೆಯಬೇಕು. ಸ್ಥಳೀಯ ಯುವಕರು ಉದ್ಯೋಗ ಅರಸಿ ದೂರದ ಊರುಗಳಿಗೆ ವಲಸೆ ಹೋಗುವುದನ್ನು ತಪ್ಪಿಸಿ, ಜಿಲ್ಲೆಯಲ್ಲಿಯೇ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ 10ರಿಂದ 12 ಸಾವಿರ ಉದ್ಯೋಗಗಳನ್ನು ಕಲ್ಪಿಸುವ ಸಂಕಲ್ಪ ಹೊಂದಲಾಗಿದೆ.ವಿಶೇಷವಾಗಿ ಕೈಗಾರಿಕಾ ಯೋಜನೆಗಳಿಗಾಗಿ ಭೂಮಿ ಕಳೆದುಕೊಂಡ ರೈತ ಕುಟುಂಬಗಳ ಯುವಕರಿಗೆ ಉದ್ಯೋಗದಲ್ಲಿ ಮೊದಲ ಆದ್ಯತೆ ನೀಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಹೇಳಿದರು.

ಬಸವನ ಬಾಗೇವಾಡಿ ತಾಲೂಕಿನ ಮುಳವಾಡ ಕೈಗಾರಿಕಾ ಪ್ರದೇಶದಲ್ಲಿ ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್‌ನ ಬೃಹತ್ ಕೈಗಾರಿಕಾ ಘಟಕ ಸ್ಥಾಪನೆಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕೈಗಾರಿಕಾ ಯೋಜನೆಗಳಿಗಾಗಿ ಭೂಮಿ ನೀಡಿದ ರೈತರು ಹಾಗೂ ಸಂತ್ರಸ್ತ ಕುಟುಂಬಗಳಿಗೆ ಉದ್ಯೋಗಾವಕಾಶಗಳಲ್ಲಿ ಪ್ರಥಮ ಆದ್ಯತೆ ನೀಡಬೇಕು.ಸ್ಥಳೀಯ ನಿವಾಸಿಗಳಿಗೆ ಕಾಯಂ ಹುದ್ದೆಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುವಂತೆ ಕ್ರಮ ಕೈಗೊಳ್ಳಲಾಗುವುದು. ಭೂಸ್ವಾಧೀನಕ್ಕೆ ಸಂಬಂಧಿಸಿದ ರೈತರ ಬಾಕಿ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಿ, ಅರ್ಹರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರಿಲಯನ್ಸ್ ಗ್ರೂಪ್ ಸುಮಾರು 1,600 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆಯೊಂದಿಗೆ ಘಟಕ ಸ್ಥಾಪಿಸುತ್ತಿದ್ದು,ಹೆಚ್ಚು ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ. ಸ್ಥಳೀಯ ಯುವಕರಿಗೆ ಉದ್ಯೋಗ ಕಲ್ಪಿಸುವುದರ ಜತೆಗೆ ಜಿಲ್ಲೆಯ ಆರ್ಥಿಕ ಬೆಳವಣಿಗೆಗೂ ಈ ಯೋಜನೆ ಮಹತ್ವದ ಕೊಡುಗೆ ನೀಡಲಿದೆ ಎಂದರು. ವಿಜಯಪುರ ಜಿಲ್ಲೆಯಲ್ಲಿ ಹಿಂದೆ ಕೈಗಾರಿಕೆಗಳ ಸ್ಥಾಪನೆಗೆ ಹಲವು ಅಡೆತಡೆಗಳಿದ್ದವು.ಇದೀಗ ಹೂಡಿಕೆಗೆ ಪೂರಕ ವಾತಾವರಣ ನಿರ್ಮಾಣವಾಗಿದ್ದು, ಹಲವು ಪ್ರತಿಷ್ಠಿತ ಕಂಪನಿಗಳು ಜಿಲ್ಲೆಯಲ್ಲಿ ಘಟಕ ಸ್ಥಾಪಿಸಲು ಮುಂದೆ ಬಂದಿವೆ. ಟೆರಾ ಸರ್ಕ್ಯೂಟ್ಸ್,ಜನಿತ್ ಎನರ್ಜಿ ಸೊಲ್ಯೂಷನ್ಸ್, ವಿಂಡ್‌ಮಿಲ್ ಟವರ್ ತಯಾರಿಕಾ ಘಟಕಕ್ಕೆ 20 ಎಕರೆ ಭೂಮಿ ನೀಡಲಾಗಿದೆ. ಹೈಟೆಕ್ ಪೈಪ್ಸ್ ಸಂಸ್ಥೆಯೂ ಸುಮಾರು 250 ಕೋಟಿ ಹೂಡಿಕೆಯೊಂದಿಗೆ ಘಟಕ ಸ್ಥಾಪಿಸಲು ಮುಂದಾಗಿದೆ.

ಇದರ ಜತೆಗೆ ಮೇಟಾ ಗ್ರೂಪ್, ಯೂಲರ್ ಮೋಟಾರ್ಸ್, ಸುಜ್ಲಾನ್ ಎನರ್ಜಿ, ಎಜಾಕಿ, ವಿಂಗ್ಸ್ ವಿಟಾರಾ, ರೆಫೆಕ್ಸ್ ಇಂಡಸ್ಟ್ರೀಸ್, ಟೊಂಬೋ ಇಮೇಜಿಂಗ್, ಸರ್ವೋಟೆಕ್ ಪವರ್ ಸಿಸ್ಟಮ್ಸ್ ಹಾಗೂ ಹಿಂದೂಸ್ತಾನ್ ಕೋಕಾಕೋಲಾ ಸೇರಿದಂತೆ ಹಲವು ಪ್ರತಿಷ್ಠಿತ ಸಂಸ್ಥೆಗಳು ಹೂಡಿಕೆ ಮಾಡಲು ಆಸಕ್ತಿ ತೋರಿವೆ.

ಇಟ್ಟಂಗಿಹಾಳದಲ್ಲಿ ಕೆಎಸ್‌ಡಿಎಲ್‌ನ ಎರಡನೇ ಘಟಕ ಸ್ಥಾಪನೆಯಾಗುತ್ತಿದ್ದು, ಇದರಿಂದ ಸುಮಾರು 500 ಜನರಿಗೆ ಉದ್ಯೋಗ ದೊರೆಯಲಿದೆ. ಈ ಎಲ್ಲ ಯೋಜನೆಗಳ ಮೂಲಕ ಜಿಲ್ಲೆಯನ್ನು ಪ್ರಮುಖ ಕೈಗಾರಿಕಾ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದರ ಜೊತೆಗೆ ಉದ್ಯೋಗಸೃಷ್ಟಿಗೊತ್ತುನೀಡಲಾಗುವುದುಎಂದುತಿಳಿಸಿದರು.

ಕಾರ್ಯಕ್ರಮದಲ್ಲಿ ನಾಗಠಾಣ ಶಾಸಕ ವಿಠಲ ಕಟಕಧೋಂಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ,ಮಾಜಿ ಶಾಸಕ ರಾಜು ಆಲಗೂರ,ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋವಿಂದ ರೆಡ್ಡಿ, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕರಾದ ದೊಡ್ಡ ಬಸವರಾಜು, ರಿಲಯನ್ಸ್ ಇಂಡಸ್ಟ್ರೀಸ್‌ನ ಪ್ರಮುಖರಾದ ಅರ್ಪಣ್ ಬಸು, ಕೇತನ್ ಮೋದಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ,ವಿಜಯಪುರ ಉಪ ವಿಭಾಗಾಧಿಕಾರಿ ಜುಫಿಶಾನ್ ಹಕ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು,ರೈತರು ಹಾಗೂ ಗಣ್ಯರು ಉಪಸ್ಥಿತರಿದ್ದರು.



ಮುಳವಾಡದಲ್ಲಿ ಬಹುದಿನಗಳ ಕನಸು ನನಸು :ಶಾಸಕ ಶಿವಾನಂದ ಪಾಟೀಲ



ಬಸವನ ಬಾಗೇವಾಡಿ ತಾಲೂಕಿನ ಮುಳವಾಡದಲ್ಲಿ ರಿಲಯನ್ಸ್‌ನಂತಹ ಪ್ರತಿಷ್ಠಿತ ಸಂಸ್ಥೆಯ ಬೃಹತ್ ಕೈಗಾರಿಕಾ ಘಟಕ ಸ್ಥಾಪನೆಯಾಗುತ್ತಿರುವುದು ಈ ಭಾಗದ ಅಭಿವೃದ್ಧಿಯ ದೃಷ್ಟಿಯಿಂದ ಐತಿಹಾಸಿಕ ಮೈಲಿಗಲ್ಲಾಗಿದೆ. ಹಿಂದೆ ಬಂಜರು ಭೂಮಿಯೆಂದು ಗುರುತಿಸಿಕೊಂಡಿದ್ದ ಈ ಪ್ರದೇಶದಲ್ಲಿ ಇಂದು ಕೈಗಾರಿಕಾ ಕ್ರಾಂತಿಯ ಕನಸು ಸಾಕಾರಗೊಳ್ಳುತ್ತಿದೆ ಎಂದು ಮಾಜಿ ಸಚಿವ ಹಾಗೂ ಶಾಸಕ ಶಿವಾನಂದ ಪಾಟೀಲ ಹೇಳಿದರು.

ಕೈಗಾರಿಕಾ ಘಟಕ ಸ್ಥಾಪನೆಗಾಗಿ ಭೂಮಿ ನೀಡಿದ ರೈತರಿಗೆ ಹಾಗೂ ಈ ಯೋಜನೆ ಸಾಕಾರಗೊಳ್ಳಲು ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.ಕೈಗಾರಿಕೆಗಳ ಸ್ಥಾಪನೆಯ ಉದ್ದೇಶ ಸ್ಥಳೀಯ ಯುವಕರಿಗೆ ಉದ್ಯೋಗ ಕಲ್ಪಿಸುವುದಾಗಿದೆ. ಜಿಲ್ಲೆಯ ಯುವಕರು ಉದ್ಯೋಗಕ್ಕಾಗಿ ಬಂದರೂ ಅವರಿಗೆ ಆದ್ಯತೆ ದೊರೆಯಬೇಕು. ವಿಶೇಷವಾಗಿ ಸ್ಥಳೀಯರಿಗೆ ಮೀಸಲಾದ ಉದ್ಯೋಗಾವಕಾಶಗಳನ್ನು ಅವರಿಗೆ ನೀಡಬೇಕು ಎಂದು ಸಂಸ್ಥೆಯ ಆಡಳಿತ ಮಂಡಳಿಗೆ ಸೂಚಿಸಿದರು. ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಅತಿ ಹೆಚ್ಚು ಕೃಷಿ ಭೂಮಿ ಮುಳುಗಡೆಯಾದ ಪ್ರದೇಶಗಳಲ್ಲಿ ಬಸವನ ಬಾಗೇವಾಡಿ ತಾಲೂಕು ಕೂಡ ಒಂದಾಗಿದೆ. ಹೀಗಾಗಿ ಈ ಭಾಗದ ರೈತರಿಗೆ ಕೈಗಾರಿಕಾ ಬೆಳವಣಿಗೆಯ ಮೂಲಕ ಉದ್ಯೋಗ ಹಾಗೂ ಆರ್ಥಿಕ ಭದ್ರತೆ ಕಲ್ಪಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಶಾಸಕ ಶಿವಾನಂದ ಪಾಟೀಲ ಅಭಿಪ್ರಾಯಪಟ್ಟರು.

ನೀರಾವರಿ ಮತ್ತು ಕೈಗಾರಿಕಾ ಬೆಳವಣಿಗೆಗೆ ಸಮಾನ ಆದ್ಯತೆ



ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ, ಆಹಾರ ಸಂಸ್ಕರಣೆಗೆ ಉತ್ತೇಜನ ಜಿಲ್ಲೆಯಲ್ಲಿ ದಾಳಿಂಬೆ, ನಿಂಬೆ, ದ್ರಾಕ್ಷಿ ಸೇರಿದಂತೆ ಹಲವು ಕೃಷಿ ಉತ್ಪನ್ನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸುವ ಉದ್ದೇಶದಿಂದ ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಕಂಪನಿಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ಮಹಾರಾಷ್ಟ್ರದ ಬಾರಾಮತಿ ಮಾದರಿಯಲ್ಲಿ ವಿಜಯಪುರ ಜಿಲ್ಲೆಯಲ್ಲಿ ನೀರಾವರಿ, ಕೈಗಾರಿಕೆ, ಹೈನುಗಾರಿಕೆ ಹಾಗೂ ಆಹಾರ ಸಂಸ್ಕರಣಾ ಕ್ಷೇತ್ರಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ. ನೀರಾವರಿ ಯೋಜನೆಯ ಮೂಲಕ ಕೆರೆಗಳನ್ನು ತುಂಬಿಸಲಾಗಿದ್ದು, ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವಿದೆ. ನೀರಾವರಿ ಮತ್ತು ಕೈಗಾರಿಕಾ ಬೆಳವಣಿಗೆಗೆ ಸಮಾನ ಆದ್ಯತೆ ನೀಡುವ ಮೂಲಕ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ರೂಪಿಸಲಾಗುವುದು ಎಂದು ಸಚಿವ ಎಂ.ಬಿ.ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು.

ಏಳು ಮಂದಿಯ ಹತ್ಯೆ ಶವ ಸಾಗಿಸಲು 'ಪ್ರೆಸ್' ಗುರುತಿನ ದುರ್ಬಳಕೆ!

ಬೆಂಗಳೂರು: ರಾಜ್ಯವನ್ನೇ ಬೆಚ್ಚಿಬೀಳಿಸಿರುವ ಏಳು ಮಂದಿಯ ಸರಣಿ ಹತ್ಯೆಯ ಶವಗಳನ್ನು ಯಾರಿಗೂ ಅನುಮಾನ ಬಾರದಂತೆ ಸಾಗಿಸಲು ಪ್ರಮುಖ ಆರೋಪಿ ಇಂದುಶೇಖರ್ ರೂಪಿಸಿದ್ದ ವ್ಯವಸ್ಥಿತ ಯೋಜನೆಯು ಪೊಲೀಸರ ತನಿಖೆಯಲ್ಲಿ ಬಯಲಾಗಿದೆ. ನಕ್ಷೆಗಳನ್ನುನೋಡಿ ತಪಾಸಣೆಯಿಂದ ತಪ್ಪಿಸಿಕೊಳ್ಳಲು ಆರೋಪಿ ಪತ್ರಿಕೋದ್ಯಮದ ಹೆಸರನ್ನೇ ದುರ್ಬಳಕೆ ಮಾಡಿಕೊಂಡಿದ್ದ ಎಂಬುದು ಬೆಳಕಿಗೆ ಬಂದಿದೆ.

ಶವಗಳನ್ನು ಸಾಗಿಸಲು ಇಂದುಶೇಖರ್ ತನ್ನ ಯೆಲ್ಲೋ ಬೋರ್ಡ್ ಟೊಯೋಟಾ ಇಟಿಯೋಸ್ ಕಾರನ್ನು ಬಳಸಿದ್ದನು. ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರು ಕಾರನ್ನು ತಡೆದು ಪರಿಶೀಲಿಸದಂತೆ ತಡೆಯುವ ಉದ್ದೇಶದಿಂದ ಕಾರಿನ ಮುಂಭಾಗದ ಗಾಜಿನ ಮೇಲೆ 'ಪ್ರೆಸ್' ಚಿಹ್ನೆಯನ್ನು ಅಳವಡಿಸಿಕೊಂಡಿದ್ದನು. ಇಷ್ಟಕ್ಕೇ ನಿಲ್ಲದ ಆರೋಪಿ, ದಸರಾ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ಪತ್ರಕರ್ತರ ಪ್ರವಾಸ ಎಂಬ ಬರಹವಿರುವ ದೊಡ್ಡ ಬ್ಯಾನರ್ ಸಿದ್ಧಪಡಿಸಿದ್ದನು. ಅದನ್ನು ಕಾರಿನ ನಂಬರ್ ಪ್ಲೇಟ್ ಕಾಣದಂತೆ ಅಡ್ಡಲಾಗಿ ಕಟ್ಟಿಕೊಂಡು ಸಂಚರಿಸುತ್ತಿದ್ದನು ಎನ್ನಲಾಗಿದೆ.

ಸಚಿವ ಈಶ್ವರ ಖಂಡ್ರೆ ಅವರಿಗೆ ಕ.ರಾ.ಗ್ರಾಪಂ ಗ್ರೇಡ್-1 ಕಾರ್ಯದರ್ಶಿಗಳ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿ ಮನವಿ ಸಲ್ಲಿಕೆ

ಗ್ರೇಡ್-1 ಕಾರ್ಯದರ್ಶಿಗಳ ಮುಂಬಡ್ತಿ ಕೋಟಾ ಶೇ.40ಕ್ಕೆ ಹೆಚ್ಚಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಗ್ರಾಮ ಪಂಚಾಯಿತಿ ಗ್ರೇಡ್-1 ಕಾರ್ಯದರ್ಶಿಗಳಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಹುದ್ದೆಗೆ ನೀಡಲಾಗುವ ಮುಂಬಡ್ತಿ ಕೋಟಾವನ್ನು ಪ್ರಸ್ತುತ ಶೇ.35ರಿಂದ ಶೇ. 40ಕ್ಕೆ ಹೆಚ್ಚಿಸುವಂತೆ ಬೆಂಗಳೂರಿನ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಗ್ರೇಡ್-1 ಕಾರ್ಯದರ್ಶಿಗಳ ಕ್ಷೇಮಾಭಿವೃದ್ಧಿ ಸಂಘ (ನೋಂ) ವತಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಬಾಷಾ ನದಾಫ್ ಅವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಸಚಿವರಿಗೆ ಮನವಿ ಸಲ್ಲಿಸಿ, ಹಲವು ವರ್ಷಗಳಿಂದ ಗ್ರೇಡ್-1 ಕಾರ್ಯದರ್ಶಿಗಳು ಮುಂಬಡ್ತಿಯಿಂದ ವಂಚಿತರಾಗಿದ್ದು, ಅವರ ವೃತ್ತಿಜೀವನದ ಭವಿಷ್ಯಕ್ಕೆ ಅನುಕೂಲವಾಗುವಂತೆ ಮುಂಬಡ್ತಿ ಕೋಟಾ ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ. ಪಂಚಾಯತ್‌ರಾಜ್ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ಈಗಾಗಲೇ ಮುಂಬಡ್ತಿ ಕೋಟಾವನ್ನು ಶೇ.35ರಿಂದ ಶೇ.40ಕ್ಕೆ ಹೆಚ್ಚಿಸುವ ಕುರಿತು ವರದಿ ಸಲ್ಲಿಸಿದೆ. ಈ ಸಂಬಂಧದ ಕಡತ ಸಂಖ್ಯೆ ಆರ್‌ಡಿಪಿಆರ್ 192/2ಒಕೆ/2025/1823607 ಪ್ರಸ್ತುತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಹಣಕಾಸು ಇಲಾಖೆಯ ಪರಿಶೀಲನೆಯಲ್ಲಿದೆ ಎಂದು ಸಂಘ ತಿಳಿಸಿದೆ.

ಈ ಕಡತಕ್ಕೆ ಸಂಬಂಧಿಸಿದಂತೆ ಸಿ ಮತ್ತು ಆರ್ ನಿಯಮಗಳಿಗೆ ತಿದ್ದುಪಡಿ ಮಾಡಬೇಕಾಗಿದ್ದು, ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು. ಆರ್‌ಡಿಪಿಆರ್ ಹಾಗೂ ಹಣಕಾಸು ಇಲಾಖೆಗೆ ಸೂಕ್ತ ನಿರ್ದೇಶನ ನೀಡಿ ಕಡತ ವಿಲೇವಾರಿ ಮಾಡಿಸುವ ಮೂಲಕ ಗ್ರೇಡ್-1 ಕಾರ್ಯದರ್ಶಿಗಳಿಗೆ ಮುಂಬಡ್ತಿ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಬಸವರಾಜ, ಸದಸ್ಯರಾದ ಹಣಮಂತ ಚಿಗರಿ, ಸಾಯಿಲ್ ದೇವರಮನಿ, ಈರಣ್ಣ ಮಡಿವಾಳಕರ, ಶಂಕರಲಿಂಗ ದೊಡ್ಡಮನಿಸೇರಿದಂತೆಇತರರುಇದ್ದರು.



ರಾಹುಲ್ ಟೀಕೆಗೆ ತಮ್ಮದೇ ಪಕ್ಷದವರಿಂದ ತಕ್ಕ ಉತ್ತರ :ಜಿಗಜಿಣಗಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: 'ಫೋನ್ ಕದ್ದಾಲಿಕೆ ಕುರಿತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾಡಿರುವ ಆರೋಪ ರಾಜಕೀಯ ಪ್ರಚಾರದ ಮತ್ತೊಂದು ಹತಾಶ ಪ್ರಯತ್ನವಾಗಿದೆ' ಎಂದು ಲೇವಡಿ ಮಾಡಿರುವ ಸಂಸದ ರಮೇಶ ಜಿಗಜಿಣಗಿ ಅವರು, 'ಈ ಆರೋಪಕ್ಕೆ ಅವರದೇ ಪಕ್ಷದ ಹಿರಿಯ ನಾಯಕ ಸ್ಯಾಮ್ ಪಿಟ್ರೋಡಾ ಅವರ ಹೇಳಿಕೆಯೇ ತಕ್ಕ ಉತ್ತರ ನೀಡಿದೆ' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಪ್ರಧಾನಿ ಮೋದಿ ಅವರು ಫೋನ್ ಕದ್ದಾಲಿಕೆ ಮಾಡುವುದಿಲ್ಲ. ಅವರು ಕಂಪ್ಯೂಟರ್ ಮುಂದೆ ಕುಳಿತು ಇಂತಹ ಕೆಲಸ ಮಾಡುವವರಲ್ಲ ಎಂದು ಪಿಟ್ರೋಡಾ ಸ್ಪಷ್ಟವಾಗಿ ಹೇಳಿದ್ದಾರೆ. ಕಾಂಗ್ರೆಸ್‌ನ ಹಿರಿಯ ನಾಯಕರೇ ರಾಹುಲ್ ಗಾಂಧಿಯವರ ಆರೋಪದಿಂದ ದೂರ ಸರಿದಿರುವಾಗ, ಇನ್ನಾದರೂ ಕಾಂಗ್ರೆಸ್ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. ತಮ್ಮದೇ ಪಕ್ಷದ ಹಿರಿಯ ನಾಯಕರ ಹೇಳಿಕೆಯನ್ನು ಕೇಳಿಸಿಕೊಳ್ಳದಷ್ಟು ರಾಹುಲ್ ಗಾಂಧಿ ರಾಜಕೀಯ ಅಹಂಕಾರ ಬೆಳೆಸಿಕೊಂಡಿದ್ದಾರೆಯೇ?' ಎಂದು ಪ್ರಶ್ನಿಸಿದ್ದಾರೆ.

ರಾಹುಲ್ ಗಾಂಧಿಯವರಿಗೆ ರಾಜಕೀಯವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಎದುರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಒಂದಲ್ಲ ಒಂದು ವಿವಾದ ಸೃಷ್ಟಿಸುವುದು, ಆಧಾರರಹಿತ ಆರೋಪ ಮಾಡುವುದು, ಬಳಿಕ ಅದಕ್ಕೆ ಸಮರ್ಪಕ ದಾಖಲೆ ನೀಡದೆ ಮತ್ತೊಂದು ಆರೋಪದತ್ತ ಹೊರಳುವುದು ಅವರ ರಾಜಕೀಯ ಶೈಲಿಯಾಗಿದೆ. ಕಳೆದ ಒಂದು ದಶಕದಿಂದ ಮೋದಿ ಅವರ ವಿರುದ್ಧ ನಿರಂತರವಾಗಿ ಆರೋಪಗಳನ್ನು ಮಾಡುತ್ತ ಬಂದಿದ್ದಾರೆ. ಆದರೆ ದೇಶದ ಜನತೆ ಪ್ರತಿಬಾರಿಯೂ ತಮ್ಮ ಮತದಾನದ ಮೂಲಕ ಇಂತಹ ರಾಜಕೀಯ ಆರೋಪಗಳಿಗೆ ಉತ್ತರ ನೀಡಿದ್ದಾರೆ' ಎಂದು ಜಿಗಜಿಣಗಿ ತಿಳಿಸಿದ್ದಾರೆ.

'ಕಾಂಗ್ರೆಸ್ ಪಕ್ಷಕ್ಕೆ ಈಗ ನಾಯಕತ್ವದ ಬಿಕ್ಕಟ್ಟು ಮಾತ್ರವಲ್ಲ, ವಿಶ್ವಾಸಾರ್ಹತೆಯ ಬಿಕ್ಕಟ್ಟೂ ಎದುರಾಗಿದೆ. ಗಾಂಧಿ ಕುಟುಂಬದ ರಾಜಕೀಯದಲ್ಲಿ ಆರೋಪಗಳೇ ಅಸ್ತ್ರವಾಗಿವೆ. ಪ್ರಧಾನಿ ಮೋದಿಯವರ ಜನಪ್ರಿಯತೆ, ಆಡಳಿತದ ಸಾಧನೆ ಮತ್ತು ದೇಶದ ಅಭಿವೃದ್ಧಿಯ ಪಯಣವನ್ನು ಎದುರಿಸಲು ಸಾಧ್ಯವಾಗದೆ ವೈಯಕ್ತಿಕ ಆರೋಪಗಳ ಮೂಲಕ ಜನರ ಗಮನ ಬೇರೆಡೆ ಸೆಳೆಯುವ ಪ್ರಯತ್ನ ನಡೆಯುತ್ತಿದೆ' ಎಂದಿದ್ದಾರೆ.

'ರಾಹುಲ್ ಗಾಂಧಿ ಪ್ರಧಾನಿಯಾಗುವ ಕನಸು ಕಾಣುವುದರಲ್ಲಿ ತಪ್ಪಿಲ್ಲ. ಆದರೆ ದೇಶದ ಜನರ ವಿಶ್ವಾಸ ಗಳಿಸದೆ, ಸಂಸತ್ತಿನಲ್ಲಿ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸದೆ, ಪ್ರತಿಯೊಂದು ವಿಷಯದಲ್ಲೂ ಆರೋಪಗಳನ್ನೇ ರಾಜಕೀಯ



ಕಾರ್ತಿಕ ಏಕಾದಶಿ: ಪಂಢರಾಪುರಕ್ಕೆ ಭಕ್ತರ ಪಾದಯಾತ್ರೆ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಸತತ 15 ನೇವರ್ಷದ ಪಾದಯಾತ್ರೆಯ ಮೂಲಕ ಯಾತ್ರೆ ಕೈಗೊಂಡಿರುವ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಗೋವಿಂದಗಿರಿ ಭಕ್ತಾಧಿಗಳು ಪಟ್ಟಣದ ಭಕ್ತರ ಊಟೋಪಚಾರದ ಸೇವೆಯ ನಂತರ ಪಂಢರಾಪುರಕ್ಕೆ ಪಾದಯಾತ್ರೆ ಬೆಳೆಸಿದರು.

ಶುಕ್ರವಾರ ಸಾಯಂಕಾಲ ಪಟ್ಟಣಕ್ಕೆ ಆಗಮಿಸಿದ ಯಾತ್ರಾರ್ಥಿಗಳು ಪಟ್ಟಣದ ಹೆಸ್ಕಾಂ ಆವರಣದಲ್ಲಿ ಭಜನೆ ಕರಿಯಪ್ಪ ನೇತೃತ್ವದಲ್ಲಿ ಕೀರ್ತನೆ, ಭಜನೆಗಳನ್ನು ನೆರವೇರಿಸಿ ವಾಸ್ತವ್ಯ ಹೂಡಿದರು.

ಈ ಸಂದರ್ಭದಲ್ಲಿ ಪಟ್ಟಣದ ವಸಂತ ನಾಡಗೌಡ ಹಾಗೂ ರಾಜೀವ ಹಾಗೂ ರಾಘವೇಂದ್ರ ಗುತ್ತೇದಾರ ಯಾತ್ರಾರ್ಥಿಗಳಿಗೆ ರಾತ್ರಿಯ ಊಟ ಹಾಗೂ ಬೆಳಿಗ್ಗೆ ಉಪಹಾರ ವ್ಯವಸ್ಥೆ ಒದಗಿಸಿದರು.

ಪ್ರತಿ ವರ್ಷದ ಪಾದಯಾತ್ರೆ ಸಮಯಕ್ಕೆ ಪಟ್ಟಣದ ಜನತೆ ನೀಡುತ್ತಿರುವ ಸಹಕಾರ ಕುರಿತು ಪಾದಯಾತ್ರೆ ಸಮಿತಿಯ ಕೊಟ್ರೇಶಿ, ವೆಂಕಟೇಶ ಹವಾಲ್ದಾರ್ ಮಾತನಾಡಿ, ಅಕ್ಟೋಬರ್ 29 ರಿಂದ ಆರಂಭಗೊಂಡ ಈ ಯಾತ್ರೆಯಲ್ಲಿ 16 ಜನ ಮಹಿಳೆಯರು ಸೇರಿ ಐವತ್ತೈದಕ್ಕೂ ಹೆಚ್ಚು ಜನರಿದ್ದು, ನವೆಂಬರ್ 20 ಶುಕ್ರವಾರದಂದು ಪಂಢರಾಪುರ ತಲುಪುತ್ತದೆ. ನಂತರ ಎಲ್ಲ ಪಾದಯಾತ್ರಿಗಳು ತಮ್ಮ ತಮ್ಮ ಗ್ರಾಮಕ್ಕೆ ತೆರಳಲಿದ್ದಾರೆ ಎಂದರು.

ಕಾರ್ತಿಕ ಏಕಾದಶಿ ಯಾತ್ರೆಯ ನೇತೃತ್ವವನ್ನು ಭಜನೆ ಕರಿಯಪ್ಪ ವಹಿಸಿದ್ದು , ಇವರು ಸತತ 15 ವರ್ಷಗಳಿಂದ ನಿರಂತರ ಪಾದಯಾತ್ರೆ ಕೈಗೊಂಡಿರುವುದು ವಿಶೇಷ. ಇವರೊಡನೆ ತಿಮ್ಮಯ್ಯ, ಹೊನ್ನುರಪ್ಪ ಹವಾಲ್ದಾರ್, ಸಾಯಣ್ಣಕೆರೆ ದೊಡ್ಡಪ್ಪ, ಭಜನೆ ದೊಡ್ಡಪ್ಪ, ಪುಟ್ಟಮ್ಮ, ನಾಗಮ್ಮ, ಪ್ರೇಮಕ್ಕ, ಚಿತ್ತಮ್ಮ, ರಾಧಮ್ಮ ನೇತೃತ್ವ ವಹಿಸಿದ್ದರು.



ಸರಕಾರಿ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಎಂ.ವೀ. ಫೌಂಡೇಶನ್‌ಗೆ ಗೌರವ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸರಕಾರಿ ಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮಹತ್ವದ ಕೊಡುಗೆ ನೀಡಿರುವ ಎಂ.ವೀ. ಫೌಂಡೇಶನ್‌ಗೆ, ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ವಿಜ್ಞಾನ ಜಾತ್ರೆಯಲ್ಲಿ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ನೀಡಿದ ಗಣನೀಯ ಕೊಡುಗೆಯನ್ನು ಗುರುತಿಸಿ ಅಧಿಕೃತವಾಗಿ ಗೌರವಿಸಿ ಸನ್ಮಾನಿಸಲಾಯಿತು.

ಶನಿವಾರ ತಿಕೋಟಾದಲ್ಲಿ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಡಾ. ಎಂ. ಬಿ. ಪಾಟೀಲ್ ಹಾಗೂ ಶಾಲಾ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪ ಅವರು ಉಪಸ್ಥಿತರಿದ್ದರು. ಶಿಕ್ಷಣ ಇಲಾಖೆಯ ಅಧಿಕಾರಿಗಳು, ಗಣ್ಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಎಂ.ವೀ. ಫೌಂಡೇಶನ್‌ನ ಸಿಎಸ್‌ಆರ್ ಮುಖ್ಯಸ್ಥರಾದ ಶ್ರೀ ವಿನಯಕುಮಾರ್ ಬಿ. ಜಿ. ಅವರು ಸಂಸ್ಥೆಯ ಪರವಾಗಿ ಭಾಗವಹಿಸಿ ಗೌರವ ಸನ್ಮಾನವನ್ನು ಸ್ವೀಕರಿಸಿದರು. ಗುಣಮಟ್ಟದ ಹಾಗೂ ಎಲ್ಲರನ್ನೂ ಒಳಗೊಂಡಶಿಕ್ಷಣಕ್ಕೆಆದ್ಯತೆನೀಡುವಉದ್ದೇಶದಿಂದ ಎಂ.ವೀ. ಗ್ರೂಪ್ ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ ಮೂಲಕ ವಿಜಯಪುರ ಜಿಲ್ಲೆಯ ತಿಕೋಟಾ ಮತ್ತು ಬಬಲೇಶ್ವರ ಪ್ರದೇಶಗಳಲ್ಲಿನ 60 ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಒಟ್ಟು 147 ಸ್ಮಾರ್ಟ್ ತರಗತಿಗಳನ್ನು ಸ್ಥಾಪಿಸಿದೆ. ಈ ಯೋಜನೆಯನ್ನು ಎಂ.ವೀ. ಗ್ರೂಪ್‌ನ ಸಮಾಜಮುಖಿ ಅಂಗಸಂಸ್ಥೆಯಾದ ಎಂ.ವೀ. ಫೌಂಡೇಶನ್ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಈ ಯೋಜನೆಯಿಂದ 16,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಂತ್ರಜ್ಞಾನ ಆಧಾರಿತ, ಸಂವಾದಾತ್ಮಕ ಹಾಗೂ ಆಸಕ್ತಿದಾಯಕ ಕಲಿಕಾ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳ ಕುಟುಂಬಗಳು ಹಾಗೂ ಸುತ್ತಮುತ್ತಲಿನ ಸ್ಥಳೀಯ ಸಮುದಾಯಗಳನ್ನು ಒಳಗೊಂಡಂತೆ ಈ ಯೋಜನೆಯ ಸಾಮಾಜಿಕ ಪ್ರಭಾವವು 2 ಲಕ್ಷಕ್ಕೂ ಅಧಿಕ ಜನರನ್ನು ತಲುಪುತ್ತಿದೆ.

ಈ ಸಂದರ್ಭದಲ್ಲಿ ಗೌರವಾನ್ವಿತ ಕೈಗಾರಿಕಾ ಸಚಿವರಾದ ಡಾ. ಎಂ. ಬಿ. ಪಾಟೀಲ್ ಹಾಗೂ ಶಾಲಾ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪ ಅವರು, ಸರ್ಕಾರಿ ಶಾಲೆಗಳಲ್ಲಿ ಆಧುನಿಕ ತಂತ್ರಜ್ಞಾನ ಆಧಾರಿತ ಕಲಿಕಾ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಎಂ.ವೀ. ಫೌಂಡೇಶನ್ ನೀಡಿರುವ ಕೊಡುಗೆ ಹಾಗೂ ಸಾಮಾಜಿಕ ಬದ್ಧತೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಮಾನ ಕಲಿಕಾ ಅವಕಾಶಗಳನ್ನು ಕಲ್ಪಿಸುವ ಈ ಪ್ರಯತ್ನವನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಉಕ ಕಲಾವಿದರಿಗೆ ಚಿತ್ರರಂಗದಲ್ಲಿ ಅವಕಾಶ ಕಲ್ಪಿಸುವ ಉದ್ದೇಶ ನನ್ನದು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಚಲನಚಿತ್ರ ರಂಗವೆಂದರೆ ಕೇವಲ ಬೆಂಗಳೂರಿನ ಗಾಂಧಿ ನಗರ ಮಾತ್ರವಲ್ಲ. ಅದು ಉತ್ತರ ಕರ್ನಾಟಕ ಪ್ರತಿ ಜಿಲ್ಲೆಗೂ ಹಬ್ಬಬೇಕೆಂದು ಬಯಸಿ, ಇಂದು ನಗರದಲ್ಲಿ ಧಗೆ ಕನ್ನಡ ಚಲನಚಿತ್ರದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಕ್ಕೆ ಹೆಮ್ಮೆ ಇದೆ ಎಂದು ಚಲನಚಿತ್ರ ನಿರ್ದೇಶಕ, ನಟ, ನಿರ್ಮಾಪಕ ಡಾ. ಸಂಗಮೇಶ ಉಪಾಸೆ ಹೇಳಿದರು.

ನಗರದ ಸಿದ್ಧೇಶ್ವರ ದೇವಸ್ಥಾನದ ಎದುರಿಗೆ ಶನಿವಾರ ಹಮ್ಮಿಕೊಂಡ ಈಶ್ವರ ಕೆರ್ನೆಳ್ಳಿ ನಿರ್ದೇಶನದ ಧಗೆ ಚಲನಚಿತ್ರದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಉತ್ತರ ಕರ್ನಾಟಕ ಕಲಾವಿದರಿಗೆ ಚಲನಚಿತ್ರ ರಂಗದಲ್ಲಿ ಅವಕಾಶ ಕಲ್ಪಿಸುವ ಉದ್ದೇಶದಿಂದ ಚಲನಚಿತ್ರ ನಿರ್ಮಾಣದಂತಹ ಚಟುವಟಿಕೆಯಲ್ಲಿ ನಿರತನಾಗಿದ್ದೇನೆ. ಧಗೆ ಚಿತ್ರವು ಬಡತನವನ್ನು ಮೆಟ್ಟಿ ನಿಲ್ಲುವ ಮತ್ತು ಕುಡಿತದ ಕೆಡಕುಗಳನ್ನು ಸಾರಿ ಹೇಳುವ ಮನೋಜ್ಞ ಸಾಮಾಜಿಕ ಕಥೆಯಾಗಿದೆ. ಚಿತ್ರದ ನಿರ್ಮಾಪಕರಾದ ದೀಪಾ ಬಿ.ಎಂ., ಈಶ್ವರಪ್ಪ ಕೆ., ಮಡಿವಾಳಪ್ಪ ಗೋಗಿ ಅವರು ಸಾಕಷ್ಟು ಪರಿಶ್ರಮ ಪಟ್ಟು, ಚಿತ್ರ ನಿರ್ಮಿಸಿದ್ದಾರೆ. ಚಿತ್ರದ ತಾರಾ ಬಳಗದಲ್ಲಿ ಉತ್ತರ ಕರ್ನಾಟಕದ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಚಿತ್ರವನ್ನು ಮುಂಬರುವ ಸಂಕ್ರಾಂತಿ ಹಬ್ಬಕ್ಕೆ ಬಿಡುಗಡೆ ಮಾಡುವ ಯೋಚನೆಯಿದೆ ಎಂದರು.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ಚಲನಚಿತ್ರವು ಸಾಮಾಜಿ ಕಳಕಳಿ ಹೊಂದಿದೆ. ಈ ಚಿತ್ರವು ಯಶಸ್ಸು ಕಾಣಲೆಂದು ಹಾರೈಸುವೆ. ಉತ್ತರ ಕರ್ನಾಕಟದ ಜಿಲ್ಲೆಗಳಲ್ಲಿ ಸಾಕಷ್ಟು ಜನ ಕಲಾವಿದರು ಇದ್ದಾರೆ, ಅವರಿಗೆ ಚಲನಚಿತ್ರ ರಂಗದಲ್ಲಿ ಅವಕಾಶ ಸಿಗುವಂತಾಗಬೇಕು ಎಂದರು.

ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಮಾತನಾಡಿ, ಧಗೆ ಚಿತ್ರವು ಬಡತನ ಮತ್ತು ಕುಡಿತದ ದುಷ್ಪರಿಣಾಮವನ್ನು ಬಿಂಬಿಸುತ್ತದೆ. ಚಿತ್ರದ ಪೋಸ್ಟರ್ ಬಿಡುಗಡೆ ಮಾಡುವ ಅವಕಾಶ ಸಿಕ್ಕಿರುವುದಕ್ಕೆ ಚಿತ್ರತಂಡಕ್ಕೆ ಧನ್ಯವಾದ ಸಲ್ಲಿಸುವೆ ಎಂದರು. ಬಿಜೆಪಿ ಮುಖಂಡ ಡಾ.ಸುರೇಶ ಬಿರಾದಾರ, ಸಂಗಮೇಶ ಜಾಧವ, ಚಲನಚಿತ್ರ ನಿರ್ಮಾಪಕ ಮಡಿವಾಳಪ್ಪ ಗೋಗಿ, ಚಿತ್ರದ ಕಲಾವಿದರಾದ ಮುತ್ತು ಸಂಕಣ್ಣವರ, ಸಚಿನ್ ಅಳ್ಳಿಕಟ್ಟಿ, ವೀರೇಶ ಗಬ್ಬೂರ, ಸುನೀಲಕುಮಾರ ಸುಧಾಕರ, ಕಪಿಲ್ ಜವಳಕರ, ನಾಗರಾಜ ಕೆ.ಆರ್. ಸೇರಿದಂತೆ ಹಲವರಿದ್ದರು.

ಕೊಲ್ಹಾರದಲ್ಲಿ ಮಕ್ಕಳ ದಿನಾಚರಣೆ ಸಂಭ್ರಮ । ಆಟೋಟ ಸ್ಪರ್ಧೆ । ಬಹುಮಾನ ವಿತರಣೆ

ಮಕ್ಕಳೇ ದೇಶದ ಭವಿಷ್ಯದ ಆಶಾಕಿರಣಗಳು :ಪಾರ್ವತಿ ಗಣಕುಮಾರ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಮಕ್ಕಳು ದೇಶದ ಅಮೂಲ್ಯ ಸಂಪತ್ತು ಹಾಗೂ ಭವಿಷ್ಯದ ಆಶಾಕಿರಣಗಳಾಗಿದ್ದಾರೆ. ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಉತ್ತಮ ಶಿಕ್ಷಣ ದೊಂದಿಗೆ ಸಂಸ್ಕಾರ, ಆತ್ಮವಿಶ್ವಾಸ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಶಿಕ್ಷಕಿ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿನಿ ಪಾರ್ವತಿ ಗಣಕುಮಾರ ಹೇಳಿದರು.

ಶನಿವಾರ ಪಟ್ಟಣದ ಶ್ರೀ ಸಂಗಮೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಭಾರತದ ಪ್ರಥಮ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರೂ ಅವರಿಗೆ ಮಕ್ಕಳ ಮೇಲೆ ಅಪಾರ ಪ್ರೀತಿಯಿತ್ತು. ಮಕ್ಕಳೇ ದೇಶದ ನಿಜವಾದ ಆಸ್ತಿ ಹಾಗೂ ಭವಿಷ್ಯದ ನಿರ್ಮಾತೃಗಳು ಎಂಬ ನಂಬಿಕೆ ಅವರದಾಗಿತ್ತು. ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಮತ್ತು ಉತ್ತಮ ಬಾಲ್ಯ ದೊರೆಯಬೇಕು ಎಂಬುದು ಅವರ ಆಶಯವಾಗಿತ್ತು. ಹೀಗಾಗಿ ಮಕ್ಕಳು ಅವರನ್ನು ಪ್ರೀತಿಯಿಂದ 'ಚಾಚಾ ನೆಹರೂ' ಎಂದು ಕರೆಯುತ್ತಿದ್ದರು. ನೆಹರೂ ಅವರು ತಮ್ಮ ಅಂಗಿಯ ಮೇಲೆ ಪ್ರತಿದಿನ ಕೆಂಪು ಗುಲಾಬಿಯನ್ನು ಧರಿಸುತ್ತಿದ್ದರು. ಮಕ್ಕಳ ಮುಗ್ಧತೆ, ಸರಳತೆ ಮತ್ತು ಸೌಂದರ್ಯವನ್ನು ಗುಲಾಬಿ ಹೂವಿಗೆ ಹೋಲಿಸುತ್ತಿದ್ದರು.

ಅವರ ಜನ್ಮದಿನವಾದ ನವೆಂಬರ್ 14ನ್ನು ದೇಶಾದ್ಯಂತ ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಲಾ ಉಪ ಪ್ರಧಾನಮಂತ್ರಿ ಸ್ಫೂರ್ತಿ ಕೋರಿ ಅತಿಥಿಗಳಾಗಿ ಮಾತನಾಡಿದರು. ಶಿಕ್ಷಕ ಬಲವಂತ ಹಿಕ್ಕನಗುತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಟೋಟದಲ್ಲಿ ಮಿಂದೆದ್ದ ಮಕ್ಕಳು: ಮಕ್ಕಳ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಹಾಗೂ ಬಹುಮಾನಗಳನ್ನು ವಿತರಿಸಲಾಯಿತು. ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಪೆನ್ನು ಮತ್ತು ಗುಲಾಬಿ ಹೂವುಗಳನ್ನು ನೀಡಿ ಸಂಭ್ರಮದಿಂದ ಮಕ್ಕಳ ದಿನಾಚರಣೆಯ ಶುಭಾಶಯ ಕೋರಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಪ್ರಧಾನಮಂತ್ರಿ ಹರ್ಷಿತ್ ಚಕ್ರಮಣಿ ವಹಿಸಿದ್ದರು. ಮುಖ್ಯ ಶಿಕ್ಷಕ ಯಲ್ಲಪ್ಪ ಶಿರೋಳ, ಶಿಕ್ಷಕರಾದ ಬಲವಂತ ಹಿಕ್ಕನಗುತ್ತಿ, ಮಲ್ಲಿಕಾರ್ಜುನ ಕುಬಕಡ್ಡಿ, ಬಸವರಾಜ ತುಪ್ಪದ, ಮಂಜುನಾಥ ಮುಳವಾಡ, ಶ್ರೀದೇವಿ ಬಿರಾದಾರ, ಶೈಲಾ ಬಿರಾದಾರ, ಶೃತಿ ಬೀಳಗಿ, ಪ್ರಿಯಾ ಕಾಖಂಡಕಿ ಹಾಗೂ ಸೌಮ್ಯ ಹಿರೇಮಠ ಉಪಸ್ಥಿತರಿದ್ದರು. ಶಿಕ್ಷಕಿ ಸೌಮ್ಯ ಹಿರೇಮಠ ಪ್ರಾರ್ಥಿಸಿದರು. ಶೈಲಾ ಬಿರಾದಾರ ಸ್ವಾಗತಿಸಿದರು. ಶೃತಿ ಬೀಳಗಿ ವಂದಿಸಿದರು. ಮಂಜುನಾಥ ಮುಳವಾಡ ಕಾರ್ಯಕ್ರಮ ನಿರೂಪಿಸಿದರು.

ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ. ಮಂಜುನಾಥ ಕೋಟೆಣ್ಣವರ ಅಭಿಮತ

ಮಧುಮೇಹಿಗಳು ಮುನ್ನೆಚ್ಚರಿಕೆ ಜೀವನಶೈಲಿ ಅಳವಡಿಸಿಕೊಳ್ಳಬೇಕು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿಶ್ವ ಮಧುಮೇಹ ದಿನಾಚರಣೆಯ ಅಂಗವಾಗಿ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸಾ ವಿಭಾಗ ಹಾಗೂ ವಿಜಯಪುರ ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘದ ಸಹಯೋಗದಲ್ಲಿ, ಬಿ.ಎಲ್.ಡಿ.ಇ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಹೊರರೋಗಿ ವಿಭಾಗದಲ್ಲಿ ನವೆಂಬರ್ 9ರಿಂದ 14ರವರೆಗೆ "ಉಚಿತ ಮಧುಮೇಹ ಪಾದರೋಗ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹ"ವನ್ನು ಆಯೋಜಿಸಲಾಗಿತ್ತು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರದ ಸಂಚಾಲಕರು ಹಾಗೂ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರಾದ ಡಾ. ಮಂಜುನಾಥ ಕೋಟೆಣ್ಣವರ ಅವರು ಶಿಬಿರಾರ್ಥಿಗಳು ಮತ್ತು ವೈದ್ಯಕೀಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಮಧುಮೇಹ ನಿಯಂತ್ರಣಕ್ಕೆ ಇನ್ಸುಲಿನ್ ಆವಿಷ್ಕರಿಸಿದ ಕೆನಡಾದ ವಿಜ್ಞಾನಿ ಡಾ. ಫ್ರೆಡರಿಕ್ ಬ್ಯಾಂಟಿಂಗ್ ಅವರ ಜನ್ಮದಿನದ ಅಂಗವಾಗಿ ವಿಶ್ವ ಮಧುಮೇಹ ದಿನವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು. ಪ್ರತಿ ವರ್ಷ ಸುಮಾರು ಶೇ. 15ರಷ್ಟು ಮಧುಮೇಹಿಗಳು ಪಾದದ ಸಮಸ್ಯೆಗಳಿಂದ ಬಳಲುತ್ತಿದ್ದು, ಜಗತ್ತಿನಾದ್ಯಂತ ಪ್ರತಿ ಹತ್ತು ನಿಮಿಷಗಳಿಗೊಬ್ಬ ಮಧುಮೇಹಿ ಪಾದವನ್ನು ಕಳೆದುಕೊಳ್ಳುವ ಅಪಾಯ ಎದುರಿಸುತ್ತಿದ್ದಾರೆ ಎಂದು ಹೇಳಿದರು. ಈ ವರ್ಷದ ಧ್ಯೇಯವಾಕ್ಯವು "ಮಧುಮೇಹದ ಕುರಿತು ಮುನ್ನೆಚ್ಚರಿಕೆ ಕ್ರಮಗಳು" ಎಂಬುದಾಗಿದ್ದು, ಮಧುಮೇಹಿಗಳು ರೋಗದ ಬಗ್ಗೆ ಅರಿವು ಹೊಂದಿ ಮುನ್ನೆಚ್ಚರಿಕೆಯ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.ಭಾರತವು ಮಧುಮೇಹದ ರಾಜಧಾನಿಯಾಗುವತ್ತ ಸಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಅರಿವಿನ ಕೊರತೆ, ವಿವಿಧ ಧಾರ್ಮಿಕ ಆಚರಣೆಗಳು ಹಾಗೂ ಮೂಢನಂಬಿಕೆಗಳಿಂದಾಗಿ ಮಧುಮೇಹಿಗಳು ಪಾದದ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ದೀರ್ಘಕಾಲದ ಮಧುಮೇಹದಿಂದ ನರಗಳ ಕಾರ್ಯಕ್ಷಮತೆ, ರಕ್ತಸಂಚಾರ ಮತ್ತು ರೋಗನಿರೋಧಕ ಶಕ್ತಿಯಲ್ಲಿ ವ್ಯತ್ಯಯ ಉಂಟಾಗಿ ಮಧುಮೇಹ ಪಾದರೋಗ ಕಾಣಿಸಿಕೊಳ್ಳುತ್ತದೆ ಎಂದು ವಿವರಿಸಿದರು.

ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರು ಹಾಗೂ ವಿಜಯಪುರ ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯದರ್ಶಿಗಳಾದ ಡಾ. ರಮಾಕಾಂತ ಬಳೂರಕರ ಮಾತನಾಡಿ, ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಮಧುಮೇಹ ಪಾದರೋಗಕ್ಕೆ ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳು ಕೈಗೆಟುಕುವ ದರದಲ್ಲಿ ಲಭ್ಯವಿದ್ದು, ವಿಜಯಪುರ ಹಾಗೂ ನೆರೆಯ ಜಿಲ್ಲೆಗಳ ಜನರು ಈ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಶಿಬಿರದಲ್ಲಿ 120ಕ್ಕೂ ಹೆಚ್ಚು ಮಧುಮೇಹಿಗಳಿಗೆ ಗ್ಲೂಕೋಮೀಟರ್, ಮೊನೊಫಿಲಮೆಂಟ್ ಮೂಲಕ ಸ್ಪರ್ಶಜ್ಞಾನ ಪರೀಕ್ಷೆ, ಬಯೋಥಿಸಿಯೋಮೀಟರ್ ಮೂಲಕ ಕಂಪನಜ್ಞಾನ ಪರೀಕ್ಷೆ ಹಾಗೂ ಹ್ಯಾರಿಸ್ ಮ್ಯಾಟ್ ಮೂಲಕ ಪಾದದ ಒತ್ತಡ ಪರೀಕ್ಷೆಗಳನ್ನು ನಡೆಸಿ, ಅಗತ್ಯ ಚಿಕಿತ್ಸೆಯನ್ನು ಒದಗಿಸಲಾಯಿತು.

ಶಿಬಿರದ ಕೊನೆಯಲ್ಲಿ ಸಂಚಾಲಕರಾದ ಡಾ. ಮಂಜುನಾಥ ಕೋಟೆಣ್ಣವರ ಅವರು ಮಧುಮೇಹಿಗಳು ಹಾಗೂ ಅವರ ಕುಟುಂಬದ ಸದಸ್ಯರೊಂದಿಗೆ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ, ವೈದ್ಯಕೀಯ ಅಧೀಕ್ಷಕರಾದ ಡಾ. ಸಂಜೀವ ಬೆಂಟೂರ, ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರಾದ ಡಾ.ದೀಪಕ ಚವ್ಹಾಣ, ಡಾ. ಸಂಜೀವ ರಾಠೋಡ, ಡಾ.ಪ್ರದೀಪ

ಸಂಕಷ್ಟದಲ್ಲಿದ್ದ ವೈದ್ಯಕೀಯ ಬಡ ವಿದ್ಯಾರ್ಥಿಗಳಿಗೆ ಸಚಿವ ಎಂ.ಬಿ.ಪಾಟೀಲ ನೆರವಿನ ಹಸ್ತ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನೀಟ್ ಪಾಸಾಗಿ ಸರಕಾರಿ ಕೋಟಾದಡಿ ಎಂ.ಬಿ.ಬಿ.ಎಸ್. ಸೀಟು ಪಡೆದರೂ ಆರ್ಥಿಕ ಸಮಸ್ಯೆಯಿಂದಾಗಿ ಸಂಕಷ್ಟದಲ್ಲಿದ್ದ ಮೂರು ಜನ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಹಣಕಾಸು ನೆರವು ನೀಡುವ ಮೂಲಕ ಸಹಾಯ ಹಸ್ತ ಚಾಚಿದ್ದಾರೆ.

ರವಿವಾರ ನಗರದಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ಮೂರು ವಿದ್ಯಾರ್ಥಿಗಳಾದ ತಿಕೋಟಾ ತಾಲೂಕಿನ ಘೋಣಸಗಿ ಗ್ರಾಮದ ದಾನಮ್ಮ ಹಣಮಂತ ಮಾಳಿ, ಮಕಣಾಪುರ ಎಲ್. ಟಿ.– 1 ರ ಸುಪ್ರೀತ ಕಾಸು ಲಮಾಣಿ ಹಾಗೂ ಕೊಲ್ಹಾರ ತಾಲೂಕಿನ ಬಳೂತಿ ಗ್ರಾಮದ ಪ್ರಿಯಾಂಕಾ ಸುರೇಶ ಕುಂಬಾರ ಅವರಿಗೆ ಎಂ.ಬಿ.ಬಿ. ಎಸ್ ಕೋರ್ಸಿನ ಬೋಧನಾ ಶುಲ್ಕ, ಊಟ ಮತ್ತು ವಸತಿ(ಹಾಸ್ಟೇಲ್ ಮತ್ತು ಮೆಸ್)ಕ್ಕೆ ಅಗತ್ಯವಾಗಿರುವ ಹಣದ ಚೆಕ್ ನ್ನು ಸಚಿವರು ವಿತರಿಸಿದರು.

ತಿಕೋಟಾ ತಾಲೂಕಿನ ಘೋಣಸಗಿ ಗ್ರಾಮದ ವಿದ್ಯಾರ್ಥಿ, ನೀಟ್ ಪರೀಕ್ಷೆಯಲ್ಲಿ 514 ಅಂಕಗಳೊಂದಿಗೆ 72,996ನೇ ರ್ಯಾಂಕ್ ಪಡೆದು ಚಿಕ್ಕಬಳ್ಳಾಪುರದ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದಿದ್ದಾರೆ. ಇವರಿಗೆ ಮೊದಲ ಕಂತು 1,72,000 ನೆರವಿನ ಚೆಕ್ ನ್ನು ಸಚಿವರು ವಿತರಿಸಿದರು. ತಿಕೋಟಾ ತಾಲೂಕಿನ ಮಕಣಾಪುರ ಗ್ರಾಮದ ಸುಪ್ರೀತ ಕಾಸು ಲಮಾಣಿ ಅವರು ನೀಟ್ ಪರೀಕ್ಷೆಯಲ್ಲಿ 65,729ನೇ ರ್ಯಾಂಕ್ ಪಡೆದು ಬೆಳಗಾವಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ನಲ್ಲಿ ಎಂ. ಬಿ. ಬಿ. ಎಸ್. ಸೀಟು ಪಡೆದಿದ್ದು, ಅವರಿಗೆ ಮೊದಲ ಕಂತು 1,39,530 ನೆರವಿನ ಚೆಕ್ ಸಚಿವರು ವಿತರಿಸಿದರು. ಕೊಲ್ಹಾರ ತಾಲೂಕಿನ ಬಳೂತಿ ಗ್ರಾಮದ ಪ್ರಿಯಾಂಕ ಸುರೇಶ ಕುಂಬಾರ ಅವರು ನೀಟ್ ಪರೀಕ್ಷೆಯಲ್ಲಿ 40,153ನೇ ರ್ಯಾಂಕ್ ಪಡೆದು ಬಳ್ಳಾರಿಯ ವೈದ್ಯಕೀಯ ಕಾಲೇಜಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದಿದ್ದು, ಅವರಿಗೆ ಮೊದಲ ಕಂತು 1,60,160 ಆರ್ಥಿಕ ನೆರವಿನ ಚೆಕ್ ನ್ನು ಸಚಿವ ಎಂ. ಬಿ. ಪಾಟೀಲ ಅವರು ವಿತರಿಸಿದರು ಈ ಮೂವರು ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಕಾಲೇಜು, ಹಾಸ್ಟೆಲ್, ಮೆಸ್ ಹಾಗೂ ಇತರ ಶೈಕ್ಷಣಿಕ ವೆಚ್ಚಗಳ ಮೊದಲ ಕಂತಿನ ಒಟ್ಟು 4,71,690 ಮೊತ್ತವನ್ನು ಬಿ.ಎಲ್.ಡಿ.ಇ ಸಂಸ್ಥೆಯ ವತಿಯಿಂದ ಸಚಿವರು ಚೆಕ್ ವಿತರಿಸಿದರು.

ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ತ್ತು ಅಕೌಂಟ್ಸ್ ಸುಪರಿಂಟೆಂಡೆಂಟ್ ಎಸ್. ಎಸ್. ಪಾಟೀಲ ಮತ್ತು ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ಬಳಿಕ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಕೇವಲ ಆರ್ಥಿಕ ನೆರವಿನ ಸದುಪಯೋಗ ಪಡೆದುಕೊಳ್ಳುವುದಷ್ಟೇ ಅಲ್ಲದೆ, ಶ್ರದ್ಧೆ ಮತ್ತು ಪರಿಶ್ರಮದಿಂದ ಅಭ್ಯಾಸ ಮಾಡಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಬೇಕು. ಭವಿಷ್ಯದಲ್ಲಿ ಜವಾಬ್ದಾರಿಯುತ, ಆದರ್ಶ ವೈದ್ಯರಾಗಿ ರೂಪುಗೊಂಡು ಸಮಾಜದ ಬಡವರು, ದುರ್ಬಲರು ಹಾಗೂ ಅಗತ್ಯವಿರುವವರಿಗೆ ಮಾನವೀಯತೆಯಿಂದ ವೈದ್ಯಕೀಯ ಸೇವೆ ಸಲ್ಲಿಸುವಂತಾಗಬೇಕು ಎಂದು ಸಲಹೆ ನೀಡಿ ಶುಭ ಕೋರಿದರು. ವಿದ್ಯಾರ್ಥಿಗಳ ಹಿನ್ನೆಲೆ ಮತ್ತು ಸಂತಸ

ವಿದ್ಯಾರ್ಥಿಗಳ ಹಿನ್ನೆಲೆ ಮತ್ತು ಸಂತಸ

ಘೋಣಸಗಿ ಗ್ರಾಮದ ದಾನಮ್ಮ ಹಣಮಂತ ಮಾಳಿ ನೀಟ್ ನಲ್ಲಿ 72996 ರ್ಯಾಂಕ್ ಪಡೆದಿದ್ದು, ಚಿಕ್ಕಬಳ್ಳಾಪುರದ ಇನಸ್ಟಿಟ್ಯೂಟ್ ಆಫ್ ಮೆಡಿಕಲ್ ಸಾಯಿನ್ಸ್ ನಲ್ಲಿ ಸೀಟು ಪಡೆದಿದ್ದಾರೆ. ರೈತ ಕುಟುಂಬದ ಹಣಮಂತ ಮತ್ತು ಶ್ರೀದೇವಿ ಮಾಳಿ ದಂಪತಿಗೆ ನಾಲ್ಕು ಜನ ಮಕ್ಕಳಲ್ಲಿ ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ. ಮೊದಲನೇ ಪುತ್ರ ರಾಕೇಶ ಪದವಿಧರರಾಗಿದ್ದರೆ, ಎರಡನೇ ಪುತ್ರಿ ಪೂಜಾ ಬಿ.ಎಸ್ಸಿ ಓದುತ್ತಿದ್ದಾರೆ. ಕೊನೆಯ ಪುತ್ರ ಪೃಥ್ವಿರಾಜ ಬಿಜ್ಜರಗಿ ಖಾಸಗಿ ಶಾಲೆಯಲ್ಲಿ ಓದುತ್ತಿದ್ದಾರೆ. ಮೂರನೇ ಪುತ್ರಿ ದಾನಮ್ಮ ಪ್ರಾಥಮಿಕ ಶಿಕ್ಷಣವನ್ನು ಬಿಜ್ಜರಗಿಯಲ್ಲಿ ನಂತರ ದ್ವಿತೀಯ ಪಿಯುಸಿವರೆಗೆ ಆಲಮಟ್ಟಿ ನವೋದಯದಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಬರದ ಈ ಸಂದರ್ಭದಲ್ಲಿ ಮಗಳು ನೀಟ್ ಪಾಸಾಗಿದ್ದರೂ ಆರ್ಥಿಕ ಸಮಸ್ಯೆ ನಮಗೆ ಚಿಂತೆಗೀಡು ಮಾಡಿತ್ತು. ಮಗಳು ವೈದ್ಯರಾಗುವ ಕನಸು ನನಸಾಗಲು ಎಂ. ಬಿ. ಪಾಟೀಲ ಅವರು ದೇವರ ರೂಪದಲ್ಲಿ ಬಂದು ನೆರವಾಗಿದ್ದಾರೆ. ಅವರು ಸಹಾಯ ಮಾಡಿರುವುದು ಸಂತಸ ತಂದಿದೆ. ಅವರ ಈ ಸಹಾಯಕ್ಕೆ ಚಿರಋಣಿಯಾಗಿದ್ದೇನೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ದಾನಮ್ಮ ಮಾತನಾಡಿ, ಸಚಿವರ ನೆರವಿನಿಂದಾಗಿ ನಮ್ಮ ಬಡ ಕುಟುಂಬಕ್ಕೆ ಅನುಕೂಲವಾಗಿದ್ದು, ಅವರು ನಾನು ವೈದ್ಯಳಾಗುವ ಕನಸು ನನಸಾಗಲು ಕಾರಣರಾಗಿದ್ದಾರೆ ಎಂದು ಸಂತರ ವ್ಯಕ್ತಪಡಿಸಿದ್ದಾರೆ.

ಮಕಣಾಪುರ ಎಲ್. ಟಿ– 01 ರ ಮಕಣಾಪುರ ಎಲ್. ಟಿ. 1ರ ಸುಪ್ರೀತ ಕಾಸು ಲಮಾಣಿ ನೀಟ್ ಪರೀಕ್ಷೆಯಲ್ಲಿ 65729ನೇ ರ್ಯಾಂಕ್ ಪಡೆದಿದ್ದು, ಬೆಳಗಾವಿ ಇನಸ್ಟಿಟ್ಯೂಟ್ ಆಫ್ ಮೆಡಿಕಲ್ ಸಾಯಿನ್ಸ್ ಕಾಲೇಜಿನಲ್ಲಿ ಸೀಟು ಗಿಟ್ಟಿಸಿದ್ದಾರೆ. ಕಾಸು ಮತ್ತು ಸೀನಾಬಾಯಿ ಲಮಾಣಿ ದಂಪತಿಯ ಹಿರಿಯ ಪುತ್ರ ಸುಪ್ರೀತ 10ನೇ ತರಗತಿಯವರೆಗೆ ಹೊರ್ತಿ ಮುರಾರ್ಜಿ ಶಾಲೆಯಲ್ಲಿ ಓದಿದ್ದು, ವಿಜಯಪುರ ನಗರದ ಖಾಸಗಿ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಮುಗಿಸಿದ್ದಾರೆ. ಇವರ ಎರಡನೇ ಪುತ್ರಿ ಭೂಮಿಕಾ ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಓದುತ್ತಿದ್ದರೆ, ಮೂರನೇ ಮಗ ಸತೀಶ ನಾಗಠಾಣ ಮುರಾರ್ಜಿ ವಸತಿ ಶಾಲೆಯಲ್ಲಿ ಹೈಸ್ಕೂಲು ಓದುತ್ತಿದ್ದಾನೆ. ಸಚಿವರ ನೆರವಿಗೆ ಸಂತಸ ವ್ಯಕ್ತಪಡಿಸಿರುವ ವಿದ್ಯಾರ್ಥಿ ಸುಪ್ರೀತ, ಎಂ. ಬಿ. ಬಿ. ಎಸ್ ನಂತರ ಎಂ. ಡಿ ಮಾಡುವ ಕನಸು ಇದೆ. ಸಚಿವರಿಗೆ ಧನ್ಯವಾದ ಹೇಳುವುದಾಗಿ ತಿಳಿಸಿದ್ದಾರೆ. ವಿದ್ಯಾರ್ಥಿಯ ತಂದೆ ಕಾಸು ಲಮಾಣಿ ಮಾತನಾಡಿ, ನಾವು ಬಡ ಕುಟುಂಬಕ್ಕೆ ಸೇರಿದ್ದು, ಎಂ. ಬಿ. ಪಾಟೀಲರು ನಮಗೆ ದೇವರ ರೂಪದಲ್ಲಿ ಬಂದು ನೆರವಾಗಿದ್ದಾರೆ. ಮಗನನ್ನು ಡಾಕ್ಟರ್ ಮಾಡುವ ಕನಸು ಈಡೇರಿಸಲು ಕಾರಣರಾಗಿದ್ದಾರೆ. ಅವರಿಗೆ ಸದಾ ಋಣಿ ಯಾಗಿರುತ್ತೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಅದೇ ರೀತಿ, ಬಳೂತಿ ಗ್ರಾಮದ ಪ್ರಿಯಾಂಕ ಸುರೇಶ ಕುಂಬಾರ ಅವರಿಗೆ ನೀಟ್ ಪರೀಕ್ಷೆಯಲ್ಲಿ 40153 ಬಂದಿದ್ದು, ಬಳ್ಳಾರಿ ಮೆಡಿಕಲ್ ಕಾಲೇಜು ರಿಸರ್ಚ್ ಸೆಂಟರ್ ನಲ್ಲಿ ಸೀಟು ಲಭಿಸಿದೆ. ರೈತ ಕುಟುಂಬದ ಸುರೇಶ ಮತ್ತು ಈರಮ್ಮ ದಂಪತಿಯ ಪುತ್ರಿ ಪ್ರಿಯಾಂಕಾ ಪ್ರಾಥಮಿಕ ಶಿಕ್ಷಣವನ್ನು ಬಳೂತಿಯ ಸರಕಾರಿ ಶಾಲೆಯಲ್ಲಿ, ಹೈಸ್ಕೂಲು ಶಿಕ್ಷಣವನ್ನು ಕಾರದೋಳ ಮುರಾರ್ಜಿ ವಸತಿ ಶಾಲೆಯಲ್ಲಿ ಹೈಸ್ಕೂಲಿನಲ್ಲಿ ಹೈಸ್ಕೂಲ್ ಹಾಗೂ ಪಿಯುಸಿಯನ್ನು ಬೀಳಗಿಯ ಖಾಸಗಿ ಪಿಯು ಕಾಲೇಜಿನಲ್ಲಿ ತರಗತಿ ಪೂರ್ಣಗೊಳಿಸಿದ್ದಾರೆ. ಸಚಿವರ ನೆರವಿಗೆ ಕೃತಜ್ಞತೆ ಸಲ್ಲಿಸಿರುವ ವಿದ್ಯಾರ್ಥಿನಿ ತಂದೆ ಸುರೇಶ ನಮಗೆ ನಾಲ್ಕು ಜನ ಮಕ್ಕಳಿದ್ದಾರೆ. ಮೊದಲ ಮಗಳು ಭುವನೇಶ್ವರಿ ಮಹಿಳಾ ವಿವಿಯಲ್ಲಿ ಎಂ. ಎಸ್ಸಿ ಓದುತ್ತಿದ್ದಾರೆ. 3ನೇ ಪುತ್ರಿ ಪ್ರೀತಿ ನೀಟ್ ಓದುತ್ತಿದ್ದಾರೆ. ನಾಲ್ಕನೇ ಮಗಳು ಹೈಸ್ಕೂಲು ಓದುತ್ತಿದ್ದಾರೆ. ಎರಡನೇ ಮಗಳು ಈಗ ನೀಟ್ ಪಾಸಾಗಿದ್ದು, ಅವಳ ವೈದ್ಯಕೀಯ ಶಿಕ್ಷಣಕ್ಕೆ ಸಚಿವ ಎಂ. ಬಿ. ಪಾಟೀಲ ಸಾಹೇಬರು ಸಹಾಯ ಮಾಡಿದ್ದು ನಮಗೆ ತುಂಬಾ ಸಂತೋಷವಾಗಿದೆ. ಅವರು ನೆವರವನ್ನು ಸಹಾಯವ ವರದಾನವಾಗಿದೆ. ಮಗಳು ಎಂ. ಡಿ. ಮಾಡುವ ಕನಸು ಹೊಂದಿದ್ದಾಳೆ ಎಂದು ಸುರೇಶ ಕುಂಬಾರ ಸಂತಸ ವ್ಯಕ್ತಪಡಿಸಿದ್ದಾರೆ.

ಸೋನಿಯಾ ಆತ್ಮಕಥೆಯಲ್ಲಿ ಆತ್ಮಾವಲೋಕನ ಎಲ್ಲಿದೆ? ಆತ್ಮಸಮರ್ಥನೆ ಏಕಿದೆ?

■ ಉದಯರಶ್ಮಿ ದಿನಪತ್ರಿಕೆ

ತನ್ನ ಕಥೆಗೆ ತಾನೇ ನಾಯಕಿಯಾದ ಸೋನಿಯಾ ಗಾಂಧಿಯವರ ಆತ್ಮಕಥೆಯಲ್ಲಿ ಆತ್ಮಾವಲೋಕನಕ್ಕಿಂತ ಆತ್ಮಸಮರ್ಥನೆಯೇ ಹೆಚ್ಚು। 'ಬಿಲಾಂಗಿಂಗ್: ಎ ಜರ್ನಿ ಆಫ್ ಲವ್' ಕೃತಿಯಲ್ಲಿ ಕುಟುಂಬದ ಒಳಜಗಳ। ರಾಜಕೀಯ ವಿವಾದಗಳಿಗೆ ತಮ್ಮದೇ ಭಾಷ್ಯ ನೀಡಿದ ಸೋನಿಯಾ ಗಾಂಧಿ। ಆದರೆ ಎರಡು ದಶಕಗಳ ಅಧಿಕಾರದ ಪ್ರಭಾವ, ಕಾಂಗ್ರೆಸ್‌ನ ಪತನ ಮತ್ತು ವಿವಾದಗಳ ಹೊಣೆಗಾರಿಕೆಯ ಪ್ರಶ್ನೆಗಳಿಗೆ ಉತ್ತರ ಎಲ್ಲಿದೆ?

ಅಮೆರಿಕದ ಲೇಖಕ ಜಾನ್ ಬಾರ್ಥ್ ಅವರ ಮಾತಿನಂತೆ, ಪ್ರತಿಯೊಬ್ಬರೂ ತಮ್ಮ ಜೀವನದ ಕಥೆಯಲ್ಲಿ ತಮ್ಮನ್ನೇ ನಾಯಕನನ್ನಾಗಿ ಕಾಣುತ್ತಾರೆ. ಬಹುಶಃ ಸೋನಿಯಾ ಗಾಂಧಿ ಅವರ 544 ಪುಟಗಳ ಆತ್ಮಕಥೆ 'ಬಿಲಾಂಗಿಂಗ್: ಎ ಜರ್ನಿ ಆಫ್ ಲವ್' ಓದಿದಾಗ ಈ ಮಾತು ನೆನಪಾಗುತ್ತದೆ. ವೈಯಕ್ತಿಕ ಬದುಕಿನ ಪ್ರೇಮ, ಕುಟುಂಬದ ಸಂಬಂಧಗಳು, ರಾಜಕೀಯ ಸಂಘರ್ಷಗಳು ಮತ್ತು ಅಧಿಕಾರದ ಒಳಸುಳಿಗಳನ್ನು ತೆರೆದಿಡುವ ಪ್ರಯತ್ನ ಈ ಕೃತಿಯಲ್ಲಿದೆ. ಆದರೆ ಪ್ರಶ್ನೆಯೊಂದಿದೆ: ಇದು ಭಾರತದ ರಾಜಕೀಯ ಇತಿಹಾಸದ ಪ್ರಾಮಾಣಿಕ ಆತ್ಮಾವಲೋಕನವೇ ಅಥವಾ ಸೋನಿಯಾ ಗಾಂಧಿ ತಮ್ಮ ಬದುಕು ಮತ್ತು ಕುಟುಂಬದ ನಿರ್ಧಾರಗಳನ್ನು ಸಮರ್ಥಿಸಿಕೊಳ್ಳುವ ವೈಯಕ್ತಿಕ ನಿರೂಪಣೆಯೇ?


ಆತ್ಮಕಥೆ ಎಂದರೆ ಕೇವಲ ನಡೆದ ಘಟನೆಗಳ ಪಟ್ಟಿ ಅಲ್ಲ. ಅಧಿಕಾರದಲ್ಲಿದ್ದಾಗ ತೆಗೆದುಕೊಂಡ ನಿರ್ಧಾರಗಳು, ಮಾಡಿದ ತಪ್ಪುಗಳು, ಎದುರಿಸಿದ ಟೀಕೆಗಳು ಮತ್ತು ಇತಿಹಾಸದ ಮುಂದೆ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸುವ ವೇದಿಕೆಯೂ ಹೌದು. ಈ ದೃಷ್ಟಿಯಿಂದ ನೋಡಿದಾಗ ಸೋನಿಯಾ ಅವರ ಕೃತಿ ಹಲವು ಕುತೂಹಲಕಾರಿ ಸಂಗತಿಗಳನ್ನು ತೆರೆದಿಟ್ಟರೂ, ಕೆಲವು ಮಹತ್ವದ ಪ್ರಶ್ನೆಗಳನ್ನು ಹಾಗೆಯೇ ಬಿಟ್ಟಿದೆ.

ರಾಜೀವ್ ಒಳ್ಳೆಯವರು, ಸಂಜಯ್ ಕೆಟ್ಟವರೇ?

ಪುಸ್ತಕದ ಪ್ರಮುಖ ಆಕರ್ಷಣೆ ಗಾಂಧಿ ಕುಟುಂಬದ ಆಂತರಿಕ ಭಿನ್ನಾಭಿಪ್ರಾಯಗಳು. 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಜೀವ್ ಗಾಂಧಿ ಅವರು ತಾಯಿ ಇಂದಿರಾ ಗಾಂಧಿಗೆ ರಾಜೀನಾಮೆ ನೀಡಿ ಚುನಾವಣೆಗೆ ಹೋಗುವಂತೆ ಸಲಹೆ ನೀಡಿದ್ದರು ಎಂಬ ವಿಚಾರವನ್ನು ಸೋನಿಯಾ ದಾಖಲಿಸಿದ್ದಾರೆ. ಮತ್ತೊಂದೆಡೆ, ಸಂಜಯ್ ಗಾಂಧಿ ತುರ್ತು ಪರಿಸ್ಥಿತಿಯನ್ನು ಮುಂದುವರಿಸುವ ಪರವಾಗಿದ್ದರು ಮತ್ತು ವಿರೋಧ ಪಕ್ಷಗಳನ್ನು ಹತ್ತಿಕ್ಕುವ ನಿಲುವು ಹೊಂದಿದ್ದರು ಎಂಬ ಚಿತ್ರಣ ನೀಡಿದ್ದಾರೆ.

ಇಲ್ಲಿ ರಾಜಕೀಯ ವಿಶ್ಲೇಷಣೆಗೆ ಅವಕಾಶವಿದೆ. ತುರ್ತು ಪರಿಸ್ಥಿತಿಯಂತಹ ಪ್ರಜಾಪ್ರಭುತ್ವದ ಕರಾಳ ಅಧ್ಯಾಯದಲ್ಲಿ ಕುಟುಂಬದ ಇಬ್ಬರು ಪುತ್ರರ ನಿಲುವುಗಳ ವ್ಯತ್ಯಾಸವನ್ನು ವಿವರಿಸುವುದು ಮಹತ್ವದ ಸಂಗತಿ. ಆದರೆ ಈ ನಿರೂಪಣೆ ಕ್ರಮೇಣ 'ಒಳ್ಳೆಯ ಮಗ□ಕೆಟ್ಟ ಮಗ' ಎಂಬ ಚೌಕಟ್ಟಿಗೆ ಸೀಮಿತವಾಗುತ್ತದೆ.

ರಾಜೀವ್ ಅವರನ್ನು ಸಜ್ಜನ, ನಿಸ್ವಾರ್ಥಿ ಮತ್ತು ತಾಯಿಗೆ ಸರಿಯಾದ ಸಲಹೆ ನೀಡುವ ವ್ಯಕ್ತಿಯಾಗಿ ಚಿತ್ರಿಸಿದರೆ, ಸಂಜಯ್ ಅವರನ್ನು ಅಧಿಕಾರದ ಆಸೆಯಿಂದ ನಿರ್ಧಾರಗಳನ್ನು ಪ್ರಭಾವಿಸುವ ವ್ಯಕ್ತಿಯಾಗಿ ಬಿಂಬಿಸಲಾಗಿದೆ. ಮೇನಕಾ ಗಾಂಧಿ ಮತ್ತು ಸಂಜಯ್ ನಡುವಿನ ಸಂಬಂಧಗಳ ಬಗ್ಗೆಯೂ ವೈಯಕ್ತಿಕ



ಆರೋಪಗಳಿವೆ.

ಆದರೆ ಇತಿಹಾಸವನ್ನು ಕುಟುಂಬದ ಒಳಜಗಳಗಳ ಆಧಾರದಲ್ಲಿ ಮಾತ್ರ ಅಳೆಯಲು ಸಾಧ್ಯವೇ? ಇಂದಿರಾ ಗಾಂಧಿಯವರ ರಾಜಕೀಯ ನಿರ್ಧಾರಗಳಿಗೆ ಸಂಜಯ್ ಒಬ್ಬರೇ ಕಾರಣರಾಗಿದ್ದರೇ? ತುರ್ತು ಪರಿಸ್ಥಿತಿಯ ಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವ ವಿರೋಧಿ ಪರಿಣಾಮಗಳ ಹೊಣೆಗಾರಿಕೆ ಯಾರದ್ದು? ಇಂತಹ ಪ್ರಶ್ನೆಗಳಿಗೆ ಕುಟುಂಬದ ಕಥೆಗಿಂತ ಹೆಚ್ಚಿನ ರಾಜಕೀಯ ವಿಶ್ಲೇಷಣೆ ಅಗತ್ಯವಿತ್ತು.

ಬೋಫೋರ್ಸ್ ಮತ್ತು ಸಿಖ್ ದಂಗೆ: ಸಮರ್ಥನೆಯಾಚೆಗಿನ ಸತ್ಯವೆಲ್ಲಿ?

ರಾಜೀವ್ ಗಾಂಧಿ ಅವರ ರಾಜಕೀಯ ಬದುಕಿನ ಎರಡು ದೊಡ್ಡ ವಿವಾದಗಳಾದ ಬೋಫೋರ್ಸ್ ಮತ್ತು 1984ರ ಸಿಖ್ ವಿರೋಧಿ ಹಿಂಸಾಚಾರದ ಕುರಿತು ಸೋನಿಯಾ ತಮ್ಮ ಪತಿಯ ಪರ ನಿಲುವು ತೆಗೆದುಕೊಂಡಿದ್ದಾರೆ.

ಬೋಫೋರ್ಸ್ ಪ್ರಕರಣದಲ್ಲಿ ರಾಜೀವ್ ನಿರಪರಾಧಿ, ಅವರ ವಿರುದ್ಧ ರಾಜಕೀಯ ಮತ್ತು ಕಾರ್ಪೊರೇಟ್ ಶಕ್ತಿಗಳು ಸಂಚು ರೂಪಿಸಿದ್ದವು ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಆದರೆ ಈ ಪ್ರಕರಣದ ಪ್ರಮುಖ ಪಾತ್ರಧಾರಿಗಳ ಬಗ್ಗೆ, ವಿಶೇಷವಾಗಿ ಒಟ್ಟಾವಿಯೊ ಕ್ವಟ್ರೋಚಿ ವಿಚಾರದಲ್ಲಿ, ಸಮಗ್ರ ಉತ್ತರ ಕಾಣಿಸುವುದಿಲ್ಲ.

1984ರ ಸಿಖ್ ವಿರೋಧಿ ಹಿಂಸಾಚಾರದ ಸಂದರ್ಭದಲ್ಲಿ ರಾಜೀವ್ ಗಾಂಧಿ ಸೇನೆಯನ್ನು ತಕ್ಷಣ ಕಾರ್ಯ ಪೂರೈಸಬೇಕೆಂದು ಕಿವಿಮಾತು ಹೇಳಿದರು.ಕಾಮಗಾರಿ ಉದ್ಘಾಟನೆ ಸಂದರ್ಭ ಬಾದಾಮಿ ತಾಲೂಕಿನ ಭಾಜಪ ಅಧ್ಯಕ್ಷ ರಾಜೂ ಕಾಚಟ್ಟಿ, ಕಾಲೋನಿಯ ಅಧ್ಯಕ್ಷ ಎಸ್. ಎನ್.ಪರೂತಿ, ಬಂದೇ ನವಾಜ್ ಕೆಸರಟ್ಟಿ, ಶಂಕ್ರಪ್ಪ ತೆಗ್ಗಿನಮನಿ, ಆರ್. ಆರ್.ಪಾಟೀಲಸೇರಿದಂತೆಬಡಾವಣೆಯ ಗುರುಹಿರಿಯರು ಹಾಗೂ ಮಹಿಳೆಯರು ಪಾಲ್ಗೊಂಡಿದ್ದರು.



ಹಿಂಸಾಚಾರ ತಡೆಯುವಲ್ಲಿ ಆಡಳಿತ ವ್ಯವಸ್ಥೆ ಏಕೆ ವಿಫಲವಾಯಿತು? ಸಂತ್ರಸ್ತರಿಗೆ ನ್ಯಾಯ ದೊರಕಿಸಲು ರಾಜಕೀಯ ವ್ಯವಸ್ಥೆ ಏನು ಮಾಡಿತು? ಕಾಂಗ್ರೆಸ್ ನಾಯಕರ ಮೇಲಿನ ಆರೋಪಗಳಿಗೆ ಪಕ್ಷದ ಹೊಣೆಗಾರಿಕೆಯ ಉತ್ತರವೇನು?


'ದೊಡ್ಡ ಮರ ಬಿದ್ದಾಗ ಭೂಮಿ ನಡುಗುತ್ತದೆ' ಎಂಬ ರಾಜೀವ್ ಅವರ ಹೇಳಿಕೆ ಇಂದಿಗೂ ರಾಜಕೀಯ ಚರ್ಚೆಯಲ್ಲಿ ಉಲ್ಲೇಖವಾಗುತ್ತದೆ. ಇಂತಹ ಸಂದರ್ಭದಲ್ಲಿ ಸಂತ್ರಸ್ತರ ನೋವು ಮತ್ತು ನ್ಯಾಯದ ಪ್ರಶ್ನೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಿತ್ತು. ಇತಿಹಾಸದ ಮುಂದೆ ಸಮರ್ಥನೆಗಿಂತ ಸತ್ಯ ಮತ್ತು ಹೊಣೆಗಾರಿಕೆಯೇ ಮುಖ್ಯ.

ಮೋದಿಯವರ ಬಗ್ಗೆ ಮೆಚ್ಚುಗೆ, ಕಾಂಗ್ರೆಸ್ ಬಗ್ಗೆ ಮೌನ!

ಪ್ರಧಾನಿ ನರೇಂದ್ರ ಮೋದಿ ಅವರ ಬಡ ಹಿನ್ನೆಲೆ ಮತ್ತು ರಾಜಕೀಯ ಏಳಿಗೆಯನ್ನು ಸೋನಿಯಾ ಒಪ್ಪಿಕೊಂಡರೂ, ಅವರ ಪಿಆರ್ ವ್ಯವಸ್ಥೆ ಬಿಂಬಿಸುವಷ್ಟು ಬಡತನವಿರಲಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಪರ ವಾತಾವರಣವಿದ್ದರೂ ಪುಲ್ವಾಮಾ ದಾಳಿಯ ನಂತರದ ರಾಷ್ಟ್ರೀಯತೆಯ ಅಲೆ ಬಿಜೆಪಿಗೆ ಅನುಕೂಲವಾಯಿತು ಎಂಬ ವಿಶ್ಲೇಷಣೆಯನ್ನೂ ನೀಡಿದ್ದಾರೆ.

ಆದರೆ ಇಲ್ಲಿ ಮತ್ತೊಂದು ಪ್ರಶ್ನೆ ಎದುರಾಗುತ್ತದೆ. ಚುನಾವಣಾ ಸೋಲಿಗೆ ರಾಷ್ಟ್ರೀಯತೆಯ ಅಲೆಯೇ ಕಾರಣವಾಗಿದ್ದರೆ, ಕಾಂಗ್ರೆಸ್‌ನ ಸಂಘಟನಾತ್ಮಕ ದೌರ್ಬಲ್ಯ, ನಾಯಕತ್ವದ ಗೊಂದಲ ಮತ್ತು ಜನರಿಂದ ದೂರವಾದ ರಾಜಕೀಯ ನಿರ್ಧಾರಗಳ ಪಾತ್ರವೇನು?

2014ರ ನಂತರ ಕಾಂಗ್ರೆಸ್ ಸತತವಾಗಿ ಎದುರಿಸಿದ ಸೋಲುಗಳ ಬಗ್ಗೆ ಸಮಗ್ರ ಆತ್ಮಾವಲೋಕನ ಕಾಣಿಸುವುದಿಲ್ಲ. ರಾಹುಲ್ ಗ



ಭೀಮಾಶಂಕರ ಕಾರ್ಖಾನೆ ಟನ್ ಕಬ್ಬಿಗೆ 3700 ದರ ಘೋಷಣೆ :ರೈತರು ಸಂತಸ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ತಿಂಗಳುಗಟ್ಟಲೆ ಜೆಡಿಎಸ್ ಮುಖಂಡ ಬಿ.ಡಿ. ಪಾಟೀಲ, ರೈತ ಸಂಘಟನೆಗಳು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಕಬ್ಬಿನ ದರ ನಿಗದಿಪಡಿಸುವಂತೆ ನಡೆಸಿದ ಹೋರಾಟಕ್ಕೆ ಫಲ ಸಿಕ್ಕಿದೆ. ಭೀಮಾಶಂಕರ ಸಕ್ಕರೆ ಕಾರ್ಖಾನೆ (ಮರಗೂರ) ಅಧ್ಯಕ್ಷ ಹಾಗೂ ಶಾಸಕ ಯಶವಂತರಾಯಗೌಡ ಪಾಟೀಲ ಅವರು ಪ್ರತಿ ಟನ್ ಕಬ್ಬಿಗೆ 3,500+200=3,700 ದರ ನಿಗದಿಪಡಿಸಿರುವುದು ಶೇರುದಾರ ರೈತರಲ್ಲಿ ಸಂತಸ ಮೂಡಿಸಿದೆ ಎಂದು ಝಳಕಿಯ ಯುವ ಮುಖಂಡ ಸುಭಾಷ್ ಚಟ್ಟರಕಿ ಹೇಳಿದರು.

ಕಬ್ಬು ಬೆಳೆಗಾರರ ನಿರಂತರ ಹೋರಾಟ, ರೈತ ಸಂಘಟನೆಗಳ ಒತ್ತಡ ಹಾಗೂ ವಿವಿಧ ಮುಖಂಡರ ಪ್ರಯತ್ನದಿಂದ ಕಾರ್ಖಾನೆ ಆಡಳಿತ ಮಂಡಳಿ ರೈತರ ಬೇಡಿಕೆಗೆ ಸ್ಪಂದಿಸಿರುವುದು ಸ್ವಾಗತಾರ್ಹ. ಪ್ರಸಕ್ತ ಹಂಗಾಮಿನಲ್ಲಿ ರೈತರು ಉತ್ತಮ ದರದ ನಿರೀಕ್ಷೆಯಲ್ಲಿದ್ದರು. ಇದೀಗ 3,700 ದರ ಘೋಷಣೆಯಾಗಿರುವುದು ರೈತರಿಗೆ ಕೊಂಚ ನೆಮ್ಮದಿ ತಂದಿದೆ ಎಂದು ಅವರು ಅಭಿಪ್ರಾಯಪಟ್ಟರು. ಇದೇ ವೇಳೆ ಈ ಬಾರಿ ಬರಗಾಲದ ವಾತಾವರಣದಿಂದ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವು ಒದಗಿಸುವುದು ಸವಾಲಾಗಿದೆ. ಆದ್ದರಿಂದ ರೈತರ ದನಕರುಗಳಿಗೆ ನೀರು ಮತ್ತು ಮೇವು ಒದಗಿಸುವ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು.

ಬರಗಾಲದ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದಲ್ಲಿ ನೀರು ಹಾಗೂ ಆಹಾರದ ಅಭಾವ ಹೆಚ್ಚಾಗುವ ಸಾಧ್ಯತೆಯಿದೆ. ಇಂತಹ ಪರಿಸ್ಥಿತಿಯಲ್ಲಿ ಕೆಲವೆಡೆ ಕಳ್ಳತನದ ಘಟನೆಗಳು ನಡೆಯುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಪೊಲೀಸ್ ಇಲಾಖೆ ಇಂತಹ ಘಟನೆಗಳನ್ನು ತಡೆಗಟ್ಟಲು ಸೂಕ್ತ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಗ್ರಾಮ ಪಂಚಾಯಿತಿ ಅಧಿಕಾರಿಗಳು ಪ್ರತಿ ಹಳ್ಳಿಯ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದರೆ ಕಳ್ಳತನ ಸೇರಿದಂತೆ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಸಹಕಾರಿಯಾಗಲಿದೆ ಎಂದು ಸುಭಾಷ್ ಚಟ್ಟರಕಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರು ಹಾಗೂ ರೈತರು ಇದ್ದರು.

ಜೈನಾಪುರದಲ್ಲಿ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ನೂತನ ದೇವಾಲಯ ಉದ್ಘಾಟನೆ & ಮೂರ್ತಿ ಪ್ರತಿಷ್ಠಾಪನಾ ಸಮಾರಂಭ

ಹಾಲುಮತದವರ ಭಂಡಾರದಲ್ಲಿ ಶಕ್ತಿ ಹಾಗೂ ಭಕ್ತಿ ಇದೆ :ಸಚಿವ ಎಂ.ಬಿ.ಪಾಟೀಲ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಹಾಲುಮತ ಸಮಾಜ ಸ್ವಚ್ಛ ಸಮುದಾಯ. ಅವರ ಭಂಡಾರದಲ್ಲಿ ಶಕ್ತಿ ಹಾಗೂ ಭಕ್ತಿ ಇದೆ ಎಂದು ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲ ಅವರು ಹೇಳಿದರು.

ಬಬಲೇಶ್ವರ ತಾಲೂಕಿನ ಹೊಳೆ ಜೈನಾಪುರ ಗ್ರಾಮದಲ್ಲಿ ರವಿವಾರ ನಡೆದ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ನೂತನ ದೇವಾಲಯ ಉದ್ಘಾಟನೆ ಮತ್ತು ಮೂರ್ತಿ ಪ್ರತಿಷ್ಠಾಪನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಜೈನಾಪುರ ಐತಿಹಾಸಿಕ ಹಿನ್ನೆಲೆಯ ಊರವಾಗಿದೆ. ಇಲ್ಲಿನ ಕಾಶಿಬಾಯಿ ದೇಸಾಯಿಯವರ ಸ್ವಾತಂತ್ರ್ಯದ ಸ್ವಾಭಿಮಾನಿ ನೆಲ ಇದು ಎಂದರು. ಈಗಾಗಲೇ ಈ ಬೀರಲಿಂಗೇಶ್ವರ ದೇವಾಲಯಕ್ಕೆ 15 ಲಕ್ಷ ರೂ. ಅನುದಾನ ನೀಡಲಾಗಿದೆ. ಇಲ್ಲಿನ ರಸ್ತೆಗಳನ್ನು ಬೇಗ ಸುಧಾರಿಸಲಾಗುವುದು. ಹಾಲುಮತ ಸಮಾಜ ಸಿದ್ದರಾಮಯ್ಯನವರಂತಹ ಮೇರು ವ್ಯಕ್ತಿತ್ವದ ನಾಯಕನ್ನು ನೀಡಿದೆ. ಬೀರಲಿಂಗೇಶ್ವರ ದೇವರು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಆಳಂದ ತಾಲೂಕಿನ ಮಾದನ ಹಿಪ್ಪರಗಾದ ಅಭಿನವ ಶಿವಲಿಂಗ ಶಿವಯೋಗಿ ಸ್ವಾಮೀಜಿ ಮಾತನಾಡಿ, ಗಂಗೆಯನ್ನು ಪರಿವಾರವಾರದ ಶಾಪ ವಿಮೋಚನೆಗೆ ತಪಸ್ಸು ಮಾಡಿ ತಂದಿದ್ದು ಭಗೀರಥರ ಮಹಿಮೆ. ಆದರೆ ಸಚಿವ ಪಾಟೀಲರು ಸಿಕ್ಕ ಅವಕಾಶದಿಂದ ಇಡೀ ವಿಜಯಪುರ ಜಿಲ್ಲೆಗೆ ನೀರು ಹರಿಸಿ ಜನಗಳಿಗಾಗಿ ಆಧುನಿಕ ಭಗೀರಥ ಎನ್ನಿಸಿಕೊಂಡವರು. ಈ ಮಾತನ್ನು ಮಾಜಿ ಸಚಿವರಾದ ಬಿ.ಆರ್.ಪಾಟೀಲ ಅವರು ಹೇಳುತ್ತಿದ್ದರು ಎಂದರು. ಒಳ್ಳೆಯದಕ್ಕಾಗಿ ನಾವು ಬದುಕಬೇಕು. ಒಳ್ಳೆಯ ವಿಚಾರಕ್ಕಾಗಿ ನಮ್ಮ ತಲೆ ಬಳಸಿಕೊಳ್ಳಬೇಕು. ಬೇರೆಯವರ ಚಿಂತೆಯಿಂದ ಮನುಷ್ಯನ ಮನಸ್ಸು ಹಾಳಾಗುತ್ತದೆ. ಬಸವಾದಿ ಶರಣರು ಇದನ್ನೇ ಹೇಳಿದ್ದಾರೆ. ನಾವು ತನು, ಮನದಿಂದ ಶುದ್ಧವಾದರೆ ನೀವೇ ಬೀರಲಿಂಗ ಆಗುತ್ತೀರಿ. ಮನುಷ್ಯರು ಬುದ್ಧಿವಂತ, ತಾಳ್ಮೆ ಸಂಪಾದಿಸಿದರೆ ಜನಾನುರಾಗಿಯಾಗಲು ಸಾಧ್ಯ. ನಯ, ವಿನಯದ ಜೀವನ ನಮ್ಮದಾಗಬೇಕು. ಮನಸ್ಸನ್ನು ಮಡಿಯಾಗಿ ಇಟ್ಟುಕೊಳ್ಳಬೇಕು. ಎಲ್ಲರೂ ನಮ್ಮವರೆನ್ನುವ ಭಾವ ಮೂಡಿದರೆ ಎಲ್ಲರ ಬದುಕು ಸುಂದರವಾಗಲು ಸಾಧ್ಯ ಎಂದು ಸೇರಿದ್ದ ಭಕ್ತರಿಗೆ ತಿಳಿ ಹೇಳಿದರು.

ಹಾಲುಮತ ಗುರು ಪೀಠದ ಸಿದ್ದಯ್ಯ ಮಹಾಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕರಾದ ಉಮೇಶ ಮೇಟಿ, ಕುಮಾರ ದೇಸಾಯಿ, ಬಸವರಾಜ ದೇಸಾಯಿ, ದೇವಸ್ಥಾನ ಸಮಿತಿಯ ಹಣಮಂತ ಗಡಿಬಿಡಿ, ಭೀಮಶಿ ನಾಗರಾಳ, ಬಸಪ್ಪ ಕೊಡೇಕಲ್, ರಾಜು ಕಂಬಾಗಿ, ಮಲ್ಲು ಪರ್ಸಣ್ಣವರ, ರಾಜು ಕನವಾಡಿ, ಎಲ್.ಎಚ್.ದೊಡ್ಡಿ, ವೈ.ವೈ.ತಿಮ್ಮಾಪುರ ಹಾಗೂ ರಾಮಸ್ವಾಮಿ ಶಿರೂರ ಅನೇಕರು ಉಪಸ್ಥಿತರಿದ್ದರು.

ಕಬ್ಬು ಬೆಳೆಗಾರರ ಹೋರಾಟಕ್ಕೆ ಜಯ: ಟನ್‌ಗೆ 3,600 ನೀಡಲು ಸಕ್ಕರೆ ಕಾರ್ಖಾನೆ ಒಪ್ಪಿಗೆ

■ ಉದಯರಶ್ಮಿ ದಿನಪತ್ರಿಕೆ



ಯಡ್ರಾಮಿ: ತಾಲೂಕಿನ ಮಳ್ಳಿ–ನಾಗರಳ್ಳಿ ಉಗಾರ ಶುಗರ್ ಸಕ್ಕರೆ ಕಾರ್ಖಾನೆ ಪ್ರಸಕ್ತ ಸಾಲಿನಿಂದ ಪ್ರತಿ ಟನ್ ಕಬ್ಬಿನ ಬೆಳೆಗೆ 3,600 ದರ ನೀಡಲು ಒಪ್ಪಿಗೆ ನೀಡಿದೆ.

ಕಳೆದ ನಾಲ್ಕು ದಿನಗಳಿಂದ ಬೆಳಗಾವಿ ಕಾರ್ಖಾನೆಗಳು ನೀಡುವ ದರದಂತೆ ಉಗಾರ ಶುಗರ್ಸ್ ಕಾರ್ಖಾನೆಯು 3600 ದರ ನೀಡಬೇಕೆಂದು ಆಗ್ರಹಿಸಿ ರೈತರು ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಹೋರಾಟಕ್ಕೆ ಕೊನೆಗೂ ಜಯ ದೊರೆತಿದೆ.

ಕಲಬುರಗಿ ಜಿಲ್ಲಾಧಿಕಾರಿಗಳು ರೈತರ ತೀವ್ರ ಸ್ವರೂಪದ ಹೋರಾಟ ಮನಗಂಡು ಜಿಲ್ಲೆಯ ನಾಲ್ಕು ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಮಾತುಕತೆ ನಡೆಸಿ 3600 ದರ ಕೊಡಿಸುವ ಕ್ರಮಕ್ಕೆ ಮುಂದಾಗಿದ್ದು ರೈತರ ಹೋರಾಟಕ್ಕೆ ಈ ಸದ್ಯ ವಿರಾಮ ಹೇಳುವಂತಾಗಿದೆ. ರೈತರ ಸತತ ಹೋರಾಟ, ಒಗ್ಗಟ್ಟು ಹಾಗೂ ಹೋರಾಟಗಾರರ ನಿರಂತರ ಪ್ರಯತ್ನದ ಫಲವಾಗಿ ಕಬ್ಬಿಗೆ ಪ್ರತಿ ಟನ್‌ಗೆ 3,600 ದರ ನಿಗದಿಯಾಗಿರುವುದು ಕಬ್ಬು ಬೆಳೆಗಾರರಲ್ಲಿ ಸಂತಸ ಮೂಡಿಸಿದೆ.

ಇದೇ ಸಂದರ್ಭದಲ್ಲಿ ರೈತರ ನ್ಯಾಯಯುತ ಬೇಡಿಕೆ ಈಡೇರಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಹೋರಾಟಗಾರರಿಗೆ ಕಬ್ಬು ಬೆಳೆಗಾರ ರೈತರು ಗೌರವಪೂರ್ವಕವಾಗಿ ಸನ್ಮಾನಿಸಿ ಅಭಿನಂದಿಸಿದರು.ಹಲವು ದಿನಗಳಿಂದ ಹಗಲು–ರಾತ್ರಿ ಎನ್ನದೆ ಧರಣಿ ನಡೆಸಿದ ಸಾಹೇಬ ಗೌಡ ದೇಸಾಯಿ, ಸಾಂಬಶಿವ ಹಿರೇಮಠ, ಕೇಶುರಾಯಗೌಡ ಮಾಲಿಪಾಟೀಲ ಕಾಚಾಪುರ ಸೇರಿದಂತೆ ರೈತ ಮುಖಂಡರು ಹಾಗೂ ತಾಲೂಕಿನ ರೈತರ ಪರಿಶ್ರಮಕ್ಕೆ ಫಲ ಸಿಕ್ಕಿದ್ದು, ರೈತರ ಒಗ್ಗಟ್ಟು ಮತ್ತು ಸಂಘಟಿತ ಹೋರಾಟದಿಂದ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದು ಎಂಬುದಕ್ಕೆ ಈ ಹೋರಾಟ ಸಾಕ್ಷಿಯಾಗಿದೆ ಎಂದು ರೈತರು ಹರ್ಷ ವ್ಯಕ್ತಪಡಿಸಿದರು.

ಕಬ್ಬು ಬೆಳೆಗಾರರ ಹೋರಾಟಕ್ಕೆ ಬೆಂಬಲ ನೀಡಿದ ಎಲ್ಲ ರೈತರು ಹಾಗೂ ಹೋರಾಟಗಾರರಿಗೆ ಅಭಿನಂದನೆ ಸಲ್ಲಿಸಲಾಯಿತು.

ಎಸ್‌ಬಿಆರ್‌ನಲ್ಲಿ ಪೂಜ್ಯ ಲಿಂ. ಡಾ. ಶರಣಬಸವಪ್ಪ ಅಪ್ಪಾ ಜನ್ಮದಿನಾಚರಣೆ

ಕಲಬುರಗಿ : ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಭಾರತದ ಪ್ರಥಮ ಪ್ರಧಾನಮಂತ್ರಿಪಂಡಿತ್ ಜವಾಹರಲಾಲ್ ನೆಹರು ಅವರ 137ನೇ ಜಯಂತಿ ಹಾಗೂ ಶರಣಬಸವೇಶ್ವರ ಮಹಾದಾಸೋಹ ಪೀಠದ ಎಂಟನೇಪೀಠಾಧಿಪತಿಗಳಾದ ವಿದ್ಯಾಭಂಡಾರಿ ಪೂಜ್ಯ ಲಿಂಗೈಕ್ಯ ಡಾ. ಶರಣಬಸವಪ್ಪ ಅಪ್ಪಾ ಅವರ 92ನೇ ಜನ್ಮದಿನಾಚರಣೆಯ ಸ್ಮರಣಾರ್ಥ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಖುಷಿ ಅರಳಿಮರ ಅವರು ಮಕ್ಕಳ ದಿನಾಚರಣೆಯ ಮಹತ್ವ ಹಾಗೂಪಂಡಿತ್ ಜವಾಹರಲಾಲ್ ನೆಹರು ಅವರ ಜೀವನ, ಆದರ್ಶಗಳು ಮತ್ತು ಮಕ್ಕಳ ಮೇಲಿನ ಪ್ರೀತಿಯ ಕುರಿತು ಮಾತನಾಡಿದರು. ನೆಹರುಅವರು ಮಕ್ಕಳನ್ನು ದೇಶದ ಭವಿಷ್ಯದ ಶಿಲ್ಪಿಗಳೆಂದು ಪರಿಗಣಿಸಿ, ಶಿಕ್ಷಣ, ವೈಜ್ಞಾನಿಕ ಮನೋಭಾವ ಹಾಗೂ ರಾಷ್ಟ್ರ ನಿರ್ಮಾಣಕ್ಕೆಹೆಚ್ಚಿನ ಆದ್ಯತೆ ನೀಡಿದ ಮಹಾನ್ ನಾಯಕರು ಎಂದು ತಿಳಿಸಿದರು. ಇಂದಿನ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದುಜವಾಬ್ದಾರಿಯುತ ನಾಗರಿಕರಾಗಿ ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.ಇನ್ನೋರ್ವ ವಿದ್ಯಾರ್ಥಿನಿ ಸೃಷ್ಟಿ ಅವರು ವಿದ್ಯಾಭಂಡಾರಿ ಪೂಜ್ಯ ಲಿಂಗೈಕ್ಯ ಡಾ. ಶರಣಬಸವಪ್ಪ ಅಪ್ಪಾ ಅವರ ಜೀವನ, ಸಾಧನೆ ಹಾಗೂ ಸಮಾಜಕ್ಕೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಸ್ಮರಿಸಿದರು.

ಆಲಮೇಲ ಸರ್ಕಾರಿ ಶಾಲೆಯಲ್ಲಿ ಬಿಸಿಯೂಟವಿಲ್ಲದೆ ಮಕ್ಕಳು ಉಪವಾಸ!

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ಸರಕಾರಿ ಶಾಲೆಯ ಮಕ್ಕಳು ಬಿಸಿ ಊಟವಿಲ್ಲದೆ ಉಪವಾಸ, ಇಂದಿರಾ ಕ್ಯಾಂಟಿನಿನಲ್ಲಿ ಊಟ ಮಾಡಿದ ಮಕ್ಕಳು, ಪಟ್ಟಣದ ಸರಕಾರಿ ಹೆಣ್ಣುಮಕ್ಕಳ ಶಾಲೆಯಲ್ಲಿ 154 ವಿದ್ಯಾರ್ಥಿನಿಯರಿಗೆ ಮದ್ಯಾಹ್ನದ ಬಿಸಿ ಊಟದ ವ್ಯವಸ್ಥೆ ಸರಿಯಾಗಿ ನೀಡುತ್ತಿಲ್ಲ. ಈ ಬಗ್ಗೆ ಮಕ್ಕಳು ಮತ್ತು ಸಿಬ್ಬಂದಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೂ ಇದ್ದರೂ ಯಾವುದೇ ಕ್ರಮ ಕೈಗೊಳ್ಳದೆ ತಮಗೆ ಸಂಬಂಧವಿಲ್ಲದಂತೆ ನಿಷ್ಕಾಳಜಿ ತೋರಲಾಗುತ್ತಿದೆ.

ಬೇಸತ್ತ ಮಕ್ಕಳು ಪಾಲಕರ ಗಮನಕ್ಕೆ ತಂದಿದ್ದು ಗುರುವಾರ ಕೆಲವು ಪಾಲಕರು ಮತ್ತು ವಿವಿಧ ಸಂಘಟನೆಗಳ ಶಾಲೆಗೆ ಬೇಟಿ ನೀಡಿ ಪರಿಶೀಲಿಸಿದ್ದಾಗ ಅಲ್ಲಿನ ಅವ್ಯವಸ್ಥೆ ಸಾರ್ವಜನಿಕವಾಗಿ ಬೆಳಕಿಗೆ ಬಂದಿದೆ. ರೈತಪರ ಸಂಘಟನೆ ಮತ್ತು ದಲಿತ ಸಂಘಟನೆ ಮುಖಂಡ ಶಶಿಧರ ನಾಯ್ಕೋಡಿ ಪತ್ರಕರ್ತರೊಂದಿಗೆ ಮಾತನಾಡಿ, ಪ್ರಸಕ್ತ ವರ್ಷದ ಶಾಲಾ ಆರಂಭದಿಂದಲೂ ಇಲ್ಲಿನ ಶಾಲಾ ಮಕ್ಕಳಿಗೆ ಸರಕಾರ ನೀಡುತ್ತಿರುವ ಬಿಸಿಊಟ ಸರಿಯಾಗಿ ನೀಡುತ್ತಿಲ್ಲ, ನವೇಂಬರ 1 ರಿಂದ ಗ್ಯಾಸ ಖಾಲಿಯಾಗಿದ್ದು ಶಾಲೆಯಲ್ಲಿನ ಹಳೆಯ ಟೇಬಲ್ ಮತ್ತು ಖುರ್ಚಿ ಮುರಿದು ಅದರಿಂದ ಅಡುಗೆ ಮಾಡಲಾಗುತ್ತಿದೆ. ಅದೂ ಅರ್ದಮರ್ದ ಮಾಡಿ ಕೆಲವು ಮಕ್ಕಳಿಗೆ ಮಾತ್ರ ಊಟ ಸಿಕ್ಕರೆ ಇನ್ನು ಕೆಲವು ಮಕ್ಕಳು ಹಾಗೆ ಉಪವಾಸವಿರುವುದು ನಮ್ಮ ಗಮನಕ್ಕೆಬಂದಿದ್ದು ಉಪವಾಸ ಇದ್ದ ಮಕ್ಕಳಿಗೆ ಇಂದ್ರಾ ಕ್ಯಾಂಟಿನಲ್ಲಿ ಊಟ ಮಾಡಿಸಲಾಗಿದೆ ಎಂದರು. ಈ ಬಗ್ಗೆ ಮುಖ್ಯೆ ಶಿಕ್ಷಕರು, ಶಿಕ್ಷಣ ಸಂಯೋಜಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ವಿಚಾರಿಸಿದರೆ ತಮಗೆ ಸಂಬಂದವಿಲ್ಲದಂತೆ ಮಾತನಾಡುತ್ತಿದ್ದಾರೆ.

ನಾಳೆ ಶುಕ್ರವಾರ ಇಲ್ಲಿನ ಮುಖ್ಯೆ ಶಿಕ್ಷಕರನ್ನು ಅಮಾನತ್ತು ಮಾಡಿ ತಕ್ಷಣವೆ ಶಾಲಾ ಮಕ್ಕಳಿಗೆ ಸರಿಯಾಗಿ ಮದ್ಯಾಹನದ ಬೀಸಿ ಊಟದ ವ್ಯವಸ್ಥೆ ಕಲ್ಪಿಸಬೇಕು ಅದಕ್ಕಾಗಿ ನಾಳೆ ಶುಕ್ರವಾರ ಮಕ್ಕಳ ಪಾಲಕರೊಂದಿಗೆ ತರಗತಿಗಳನ್ನು ಬಂದ್ ಮಾಡಿ ಪ್ರತಿಭಟಿಸಲಾಗುವದು ಎಂದು ಹೇಳಿದರು.

ಈ ಸಂದರ್ಭದಲ್ಲಿ ದಲಿತ ಸಂಘಟನೆ ಮುಖಂದ ರಾಜು ಮೇತ್ರಿ, ರೈತ ಸಂಘದ ಮುಖಿಡರಾದ ಇಮ್ರಾನ ಯಲಗಾರ, ನಿಂಗು ಕುಂಟೋಜಿ, ನಭಿ ಮೇಲಿಮನಿ ಇದ್ದರು.

" ಈ ವರ್ಷ ಶಾಲೆ ಆರಂಭದಿಂದಲೂ ನಮಗೆ ಮೊಟ್ಟೆ ನೀಡಿಲ್ಲ, ಬಾಳೆಹಣ್ಣು ಒಂದರಲ್ಲೆ ಇಬ್ಬರು ಹಂಚಿಕೊಂಡು ತಿನ್ನುತ್ತೇವೆ. ಅದು ಎಲ್ಲರಿಗೂ ಸಿಗುವದಿಲ್ಲ. ಸಾಂಬರ ಬರಿ ತಿಳಿ ನೀರಿನಂತೆ ಇದೆ ಎಂದು ಮುಖ್ಯ ಶಿಕ್ಷಕರಿಗೆ ಹೇಳಿದರೆ "ಸುಮ್ಮನೆ ತಿನ್ನರಿ ಇಲ್ಲಾದರೆ ಬಿಡ್ರಿ" ಎಂದು ಬೆದರಿಸುತ್ತಾರೆ. ಇದರಿಂದ ಬೆಸರಗೊಂದು ಕೆಲವರು ಆಲಮೇಲದವರು ಮನೆಗೆ ಹೋಗಿ ಊಟ ಮಾದಿ ಬರುತ್ತಾರೆ. ಹಳ್ಳಿಯಿಂದ ಬಂದವರು ಹಾಗೆ ಉಪವಾಸವೆ ಇರುತ್ತಾರೆ. ಮತ್ತು ಶಾಲಾ ಮಕ್ಕಳು ಮತ್ತು ಶಿಕ್ಷಕರ ಶೌಚಾಲಯಗಳು ನಮ್ಮಿಂದಲೆ ಸ್ವಚ್ಚಗೊಳಿಸುವುದು ಮಾಡಿಸುತ್ತಾರೆ."

■ **ಶಾಲಾ ವಿದ್ಯಾರ್ಥಿಗಳು ಆಲಮೇಲ**

"ಬಿಸಿ ಊಟದ ವ್ಯವಸ್ಥೆ ಮತ್ತು ಮುಖ್ಯ ಶಿಕ್ಷಕರು ವರ್ತನೆ ಬಗ್ಗೆ ಸಂಬಂದಪಟ್ಟ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿಗೆ ಇನ್ನುವರೆಗೂ ಯಾವುದೆ ಕ್ರಮ ಕೈಗೊಂಡಿಲ್ಲ ಎನ್ನುತ್ತಾರೆ ಶಾಲೆಯ ಶಿಕ್ಷಕ ಸಿಬ್ಬಂದಿ ಕೊಟ್: ಸಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರಿಂದ ಶಾಲೆಗೆ ಕಳುಹಿಸಿ ಅಲ್ಲಿನ ವಾಸ್ತವ ಮಾಹಿತಿ ಪಡೆದು ಮುಖ್ಯ ಶಿಕ್ಷಕರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವದು."

■ **ಟಿ.ಎಸ್. ಅಲಗೂರ**
ಕ್ಷೇತ್ರ ಶಿಕ್ಷಣಾಧಿಕಾರಿ ಸಿಂದಗಿ.



ಪುಡ್ ಫೆಸ್ಟ್‌ನಲ್ಲಿ ಸಂಭ್ರಮ: ಕಬ್ಸ್ ಸಂಕಲ್ಪ ಶಾಲೆಯ ಮಕ್ಕಳೇ ಇಲ್ಲಿ ವರ್ತಕರು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳಲ್ಲಿ ವ್ಯವಹಾರ ಜ್ಞಾನ, ಸಾಮಾಜಿಕ ಅರಿವು ಹಾಗೂ ಸ್ವಾವಲಂಬನೆಯ ಮನೋಭಾವ ಬೆಳೆಸುವ ಉದ್ದೇಶದಿಂದ ವಿಜಯಪುರದ ಕಬ್ಸ್ ಸಂಕಲ್ಪ ಶಾಲೆಯಲ್ಲಿ ಭಾನುವಾರ ಪೂರ್ವ ಪ್ರಾಥಮಿಕ ವಿಭಾಗದ ಮಕ್ಕಳಿಗಾಗಿ 'ಫುಡ್ ಫೆಸ್ಟ್' ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪುಟಾಣಿ ಮಕ್ಕಳು ವಿವಿಧ ಬಗೆಯ ಆಹಾರ ಪದಾರ್ಥಗಳ ಮಳಿಗೆಗಳನ್ನು ಸ್ವತಃ ಸಿದ್ಧಪಡಿಸಿ ವ್ಯಾಪಾರಿಗಳಂತೆ ಪಾತ್ರ ನಿರ್ವಹಿಸಿದರು. ವಿವಿಧ ಅಂಗಡಿ–ಮುಂಗಟ್ಟುಗಳನ್ನು ಆಕರ್ಷಕವಾಗಿ ಸಿದ್ಧಪಡಿಸಿ, ಆಹಾರ ಪದಾರ್ಥಗಳನ್ನು ಪ್ರದರ್ಶಿಸಿ ಮಾರಾಟ ಮಾಡುವ ಮೂಲಕ ತಮ್ಮಲ್ಲಿರುವ ಪ್ರತಿಭೆ ಹಾಗೂ ಕಲಿಕಾ ಕೌಶಲವನ್ನು ಅನಾವರಣಗೊಳಿಸಿದರು. ಮಕ್ಕಳಿಗೆ ಕೇವಲ ಪಠ್ಯಪುಸ್ತಕದ ಜ್ಞಾನವಷ್ಟೇ ಅಲ್ಲದೆ, ಪ್ರಾಯೋಗಿಕ ಅನುಭವದ ಮೂಲಕ ವ್ಯವಹಾರ ನಿರ್ವಹಣೆ, ಹಣದ ಮೌಲ್ಯ, ಸಂವಹನ ಕೌಶಲ, ಸಾಮಾಜಿಕ ಒಡನಾಟ ಹಾಗೂ ತಂಡದ ಕೆಲಸದ ಮಹತ್ವ ತಿಳಿಸಿಕೊಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಮಕ್ಕಳ ಉತ್ಸಾಹ, ಸೃಜನಶೀಲತೆ ಹಾಗೂ ವಿಭಿನ್ನ ಪ್ರಯತ್ನವನ್ನು ಕಂಡು ಶಾಲೆಯ ಅಧ್ಯಕ್ಷರು ಸಂತಸ ವ್ಯಕ್ತಪಡಿಸಿದರು. ಪಾಲಕರು ಕೂಡ ಮಕ್ಕಳ ಚಟುವಟಿಕೆಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆಯ ಅಧ್ಯಕ್ಷರಾದ ಅನೂಪ್ ಅಗರ್ವಾಲ್, ಯೋಗಿತಾ ಅಗರ್ವಾಲ್, ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ಕಾರ್ಯಕ್ರಮ